ಲೋಹಿಯಾ ವಾಣಿ

ಡಿ. ಎಸ್. ನಾಗಭೂಷಣ



ಲೋಹಿಯಾ ವಾಣಿ

ಸಂಗ್ರಹ ಮತ್ತು ಅನುವಾದ:

ಡಿ.ಎಸ್.ನಾಗಭೂಷಣ

ಪ್ರಕಾಶಕರು

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ

ಶಿವಮೊಗ್ಗ - ೫೭೭ ೨೦೧

Lohia Vani

Excerpps from Lohia's writings selected and translated by **D.S.Nagabhushana.** HIG-5, 'Nudi', KHB Colony, Kallahally Extn., Vinobanagar, Shivamogga - 577 204, Tel : 08182-248574, Mobile: 94492 42284

ಮುದ್ರಣ: ೨೦೧೨, ಪುಟಗಳು: ೫೮
ಬೆಲೆ: ರೂ. ೨೫

ಪ್ರಕಾಶಕರು
ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ಸೂರಡಿ ರಸ್ತೆ, ರಾಜೇಂದ್ರ ನಗರ
ಶಿವಮೊಗ್ಗ - ೫೭೭ ೨೦೧, ದೂರವಾಣಿ: ೯೪೪೯೮೮೬೩೯೦

ಲೇಖಕನ ಮಾತು

ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನವು ೨೦೧೦ರ ಅಕ್ಟೋಬರ್‌ನಲ್ಲಿ ತನ್ನ ಉದ್ಘಾಟನೆಯ ಸಂದರ್ಭದಲ್ಲಿ ಪ್ರಕಟಿಸಿದ್ದ ಲೋಹಿಯಾ ಕೈಪಿಡಿ, ಜೆಪಿ ಕೈಪಿಡಿ ಮತ್ತು ಲೋಹಿಯಾ ವಾಣಿ ಎಂಬ ಈ ತ್ರಿವಳಿ ಕಿರುಪುಸ್ತಕಗಳು ಈಗ ಹೊಸ ಆಕಾರ ಮತ್ತು ರೂಪಗಳಲ್ಲಿ ಪರಿಷ್ಕೃತಗೊಂದು ಪ್ರಕಟವಾಗುತ್ತಿವೆ.

ಮೊದಲೆರಡು ಪುಸ್ತಕಗಳು ಭಾರತೀಯ ಸಮಾಜವಾದಿ ಚಳುವಳಿಯ ಎರಡು ಕಣ್ಣುಗಳಂತಿರುವ ಡಾ॥ ರಾಮಮನೋಹರ ಲೋಹಿಯಾ ಹಾಗೂ ಜಯಪ್ರಕಾಶ್ ನಾರಾಯಣರ ಬದುಕು ಮತ್ತು ವಿಚಾರಗಳನ್ನು ಸಂಕ್ಷಿಪ್ತವಾಗಿ ಮತ್ತು ಸಾರವತ್ತಾಗಿ ಪರಿಚಯ ಮಾಡಿಕೊಡುವ ಪ್ರಯತ್ನಗಳು. ಬದುಕು ಎಲ್ಲ ಕ್ಷೇತ್ರಗಳಲ್ಲಿ ವಾಣಿಜ್ಯಮಯವಾಗಿ, ಎಲ್ಲವನ್ನೂ ಹಣಕಾಸು ಪರಿಭಾಷೆಯಲ್ಲೇ ಸರಕಾಗಿ ಗ್ರಹಿಸಿ ಬೆಲೆ ಕಟ್ಟುತ್ತಿರುವ ಈ ದಿನಗಳಲ್ಲಿ, ಮನುಷ್ಯ ಸಂವೇದನೆಯೆಂಬುದೇ ನಿಜವಾಗಿ ಮಾಯವಾಗುತ್ತಿದೆಯೇನೋ ಎನಿಸತೊಡಗಿದೆ. ಇದರ ಫಲವಾಗಿ ಕ್ರೋಧ, ಮತ್ಸರ, ಹಿಂಸೆಗಳಿಂದ ತುಂಬಿದ ಸ್ಪರ್ಧೆ ಮತ್ತು ನವ ಶ್ರೀಮಂತಿಕೆಯ ಸಾಮಾಜಿಕ ಅಶ್ಲೀಲತೆಗಳು ಗಾಬರಿಗೊಳಿಸುವಷ್ಟರ ಮಟ್ಟಿಗೆ ಬೆಳೆಯುತ್ತಿವೆ. ನಾವು ಕಳೆದ ಅರವತ್ತು ವರ್ಷಗಳಲ್ಲಿ ಏನು ಕಟ್ಟಿ ಹೊರಟು ಎಲ್ಲಿಗೆ ತಲುಪಿದ್ದೇವೆ ಎಂಬ ಪ್ರಶ್ನೆ ನಮ್ಮನ್ನು ಸದಾ ಕಾಡತೊಡಗಿದೆ. ಇಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ತಮ್ಮ ಬದುಕನ್ನೇ ಮುಡಿಪಾಗಿರಿಸಿ, ನಾಡನ್ನು ಕಟ್ಟ ಹೊರಟ–ತಮ್ಮ

ವಿಶಿಷ್ಟ ವಿಚಾರ ಮತ್ತು ತ್ಯಾಗ ಹಾಗೂ ಸಾಹಸಗಳ ಮೂಲಕ ತಮ್ಮ ಕಾಲದ ಯುವಜನರ ಕಣ್ಮಣಿಗಳಾಗಿದ್ದ-ಇಬ್ಬರು ಧೀಮಂತ ನಾಯಕರನ್ನು ಇಂದಿನ ಯುವಜನರಿಗೆ ಪರಿಚಯ ಮಾಡಿಕೊಡುವುದು ಉಚಿತವೆಂದು ನಾನು ಭಾವಿಸಿದ್ದೇನೆ.

ಇನ್ನು ಮೂರನೆಯ ಪುಸ್ತಕ ಲೋಹಿಯಾವಾಣಿ ಲೋಹಿಯಾ ಅವರ ಸಾಹಿತ್ಯ ಮತ್ತು ಭಾಷಣಗಳಿಂದ ಆಯ್ದ ಉಲ್ಲೇಖಗಳ ಕಿರು ಸಂಗ್ರಹ. ಲೋಹಿಯಾ ಅಪೂರ್ವ ಮುನ್ನೋಟದ ಚಿಂತಕರೂ ಮತ್ತು ರಾಜಕಾರಣಿಯೂ ಆಗಿದ್ದುದರಿಂದ ಈ ಉಲ್ಲೇಖಗಳು ಹಳೆಯವೆನ್ನಿಸದೆ, ರಾಜಕೀಯ ಮತ್ತು ಸಾಮಾಜಿಕ ಪುನಾರಚನೆಯ ಕೆಲಸದಲ್ಲಿ ತೊಡಗಿರುವವರಿಗೆ ಇಂದೂ ಎಚ್ಚರಿಕೆಯ ಘಂಟೆಗಳಂತೆ, ಬೆಳಕಿನ ದಾರಿಗಳಂತೆ, ಹೊಸ ಅರಿವು ಮತ್ತು ಸ್ಫೂರ್ತಿ ತುಂಬಿ ಮುನ್ನಡೆಸಬಲ್ಲವಾಗಿವೆ. ಇದು ಈ ಹಿಂದೆ ಪ್ರಕಟವಾಗಿದ್ದ ಲೋಹಿಯಾ ಕೆಂಪು ಪುಸ್ತಕದ ಸಂಕ್ಷಿಪ್ತ ರೂಪವಲ್ಲ. ಲೋಹಿಯಾ ಸಾಹಿತ್ಯ ಎನ್ನಿಸುವ ಸರಿ ಸುಮಾರು ಎಲ್ಲ ಸಾಹಿತ್ಯವನ್ನೂ ಮತ್ತೊಮ್ಮೆ ತಡಕಿ, ಇಂದಿನ ಸಂದರ್ಭಕ್ಕೂ ಪ್ರಸ್ತುತವಾಗಬಲ್ಲ ಉಲ್ಲೇಖಗಳನ್ನು ಹೊಸದಾಗಿಸಂಪಾದಿಸಿ, ಅನುವಾದಿಸಿ, ಹೊಸ ವಿನ್ಯಾಸದಲ್ಲಿ ಜೋಡಿಸಿರುವ ಪುಸ್ತಕವಿದು. ಆದರೆ ಇದು ಲೋಹಿಯಾರ ತಾತ್ವಿಕತೆಯನ್ನು ಅರಿಯಲು Short cut ಅಲ್ಲ. ಈ ಕಿರು ಪುಸ್ತಕ ಲೋಹಿಯಾರ ಸಮಗ್ರ ವಿಚಾರಧಾರೆಯನ್ನು ಪರಿಚಯಮಾಡಿಕೊಳ್ಳಲು ಪ್ರೇರೇಪಿಸುವ ಪ್ರಯತ್ನವಷ್ಟೆ. ಇಲ್ಲಿನ ಕೆಲವು ಉಲ್ಲೇಖಗಳನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪ ರಾಜಕೀಯ ತತ್ವಶಾಸ್ತ್ರದ ಪರಿಚಯದ ಅಗತ್ಯವಿದೆ. ಆದರೆ ಅಂತಹವನ್ನು ಸುಮ್ಮನೆ

ಓದಿಕೊಂಡು ಮುಂದುವರೆದರೆ, ಪುಸ್ತಕ ಮುಗಿಸುವ ಹೊತ್ತಿಗೆ ಅವು ಸ್ವಲ್ಪವಾದರೂ ಅರ್ಥವಾಗುವ ಸಂಭವವುಂಟು.

ಈ ಮೂರೂ ಪುಸ್ತಕಗಳ ಓದಿನಿಂದ ಯುವಜನರಲ್ಲಿ ಸಮಾಜವಾದವನ್ನು ಕುರಿತು ಉದ್ದೇಶಪೂರ್ವಕವಾಗಿ ಹುಟ್ಟಿಸಲಾಗಿರುವ ಅನುಮಾನ-ಗೊಂದಲಗಳು ಸ್ವಲ್ಪಮಟ್ಟಿಗಾದರೂ ಪರಿಹಾರವಾಗಿ ಈ ಪರಿಕಲ್ಪನೆ ಮತ್ತು ಸಿದ್ಧಾಂತದ ಬಗ್ಗೆ ಹೊಸ ಕುತೂಹಲ ಉಂಟಾಗಬಹುದೆಂದು ನಾನು ಆಶಿಸಿದ್ದೇನೆ.

ಈ ಪುಸ್ತಕ ತ್ರಿವಳಿ ಪ್ರಕಟವಾದ ಒಂದು ವರ್ಷದಲ್ಲೇ ಖಾಲಿಯಾದರೂ, ಅವುಗಳಿಗೆ ಪುನರ್‌ಮುದ್ರಣದ ಸೌಭಾಗ್ಯ ಒದಗಿಬಂದಿರಲಿಲ್ಲ. ಗೀತಾಂಜಲಿ ಪುಸ್ತಕ ಪ್ರಕಾಶನದ ಗೆಳೆಯ ಜಿ.ಬಿ.ಟಿ. ಮೋಹನ್ ಅವುಗಳಿಗೆ ಈ ಭಾಗ್ಯ ಒದಗಿಸಿ ಕೊಟ್ಟಿದ್ದಾರೆ. ಅದೂ ಆಕರ್ಷಕ ಆಕಾರ ಮತ್ತು ರೂಪುಗಳಲ್ಲಿ. ಅವರಿಗೆ ಮತ್ತು ಈ ಪುಸ್ತಕಗಳ ಮೊದಲ ಮುದ್ರಣದ ಪ್ರಕಾಶಕರಾದ ಲೋಹಿಯಾ ಜನ್ಮಶತಾಬ್ಧಿ ಪ್ರತಿಷ್ಠಾನದ ಟ್ರಸ್ಟಿಗಳೆಲ್ಲರಿಗೂ ಇಲ್ಲಿ ಕೃತಜ್ಞತೆಗಳನ್ನು ಹೇಳಬೇಕು.

೧೫.೩.೨೦೧೨
ಶಿವಮೊಗ್ಗ

ಡಿ.ಎಸ್.ನಾಗಭೂಷಣ

ಲೋಹಿಯಾ ವಾಣಿ

ಸತ್ಯ ಅಖಂಡವಾದದ್ದು; ಹಾಗಿಲ್ಲದಿದ್ದರೆ ಅದು ಸತ್ಯವೇ ಅಲ್ಲ. ಬಹುಶಃ 'ಪಾರ್ಶ್ವ ಸತ್ಯ' ಎಂಬ ಸಡಿಲವಾದ ನುಡಿಗಟ್ಟಿನ ಅರ್ಥ, ಅಖಂಡ ಸತ್ಯವೆಂಬುದು ಇಲ್ಲ ಎಂದಲ್ಲ; ಬದಲಿಗೆ, ಒಂದು ಪಕ್ಕದ ಸತ್ಯ ಅಥವಾ ಕೋನದಲ್ಲಿನ ಸತ್ಯ ಎಂದರ್ಥ. ಎಲ್ಲ ಸತ್ಯವನ್ನೂ ಒಂದು ಪಕ್ಕದಿಂದ ಅಥವಾ ಅನ್ವೇಷಕ ಅಳವಡಿಸಿಕೊಂಡ ಇಲ್ಲವೇ ಆಯ್ಕೆ ಮಾಡಿದ ಕೋನದಿಂದ ಗ್ರಹಿಸಲಾಗುತ್ತದೆ. ಒಂದು ವೇಳೆ ಸರಿಯಾದ ಪಕ್ಕ ಅಥವಾ ನಿಲುವನ್ನು ಅಳವಡಿಸಿಕೊಂಡರೂ, ಅವಸರದ, ಅಡ್ಡಗಟ್ಟಲ್ಪಟ್ಟ ಅಥವಾ ಎಚ್ಚರದಪ್ಪಿದ ನೋಟದಿಂದ ತಪ್ಪು ಉಂಟಾಗಬಹುದು.

–Marx, Gandhi and Socialism, ಪು.೧

ಭಾರತದ ಜನತೆಯ ಮುಕ್ಕಾಲುಪಾಲು ನಮ್ಮ ರಾಜಕಾರಣದ ಮುಖ್ಯ ಪ್ರವಾಹದ ಹೊರಗೇ ಉಳಿದಿದೆ; ಚರಿತ್ರೆಯನ್ನು ನಿರ್ಮಿಸುವವರೆಂದು ನಿರೀಕ್ಷಿಸಲಾದ ಜನರೇ ಅದರಿಂದ ಹೊರಗುಳಿಯಲ್ಪಟ್ಟಿದ್ದಾರೆ. ಅವರನ್ನು ಸಾಮೂಹಿಕ ಬದುಕಿನ ಮೊಗಸಾಲೆಗಳಿಗೆ ಕರೆತರುವುದೇ–ಭವಿಷ್ಯತ್ಕಾಲದ ನಿರ್ಮಾಪಕರಾಗಿ–ಭಾರತದ ಸಮಾಜವಾದಿ ಪಕ್ಷದ ಪರಮ ಗುರಿಯಾಗಿರಬೇಕು.

-Marx, Gandhi and Socialism, ಪು.೭

ಭಾರತೀಯ ಸಮಾಜವಾದದ ಒಂದು ದೊಡ್ಡ ವೈಚಿತ್ರ್ಯ ಅಥವಾ ಒಂದು ದೊಡ್ಡ ದೋಷ ಎಂದರೆ ಅದು ಎಡಪಂಥೀಯ ರಾಷ್ಟ್ರೀಯವಾದವಾಗಿ ಹುಟ್ಟಿಕೊಂಡದ್ದು. ಆರಂಭದಲ್ಲಿ ಅದರ ಗುರಿ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯನ್ನು ಕೊನೆಗಾಣಿಸುವುದಾಗಿತ್ತೇ ಹೊರತು, ಸುಧಾರಣೆ ಮೂಲಕ ಬಡತನ ಅಥವಾ ಅಸಮಾನತೆಯನ್ನು ಕೊನೆಗಾಣಿಸುವುದಾಗಿರಲಿಲ್ಲ.

-ಚೌಖಾಂಬಾ, ಮಾರ್ಚ್ ೨೩, ೧೯೬೪

ಬಂಡವಾಳಶಾಹಿ ಮತ್ತು ಕಮ್ಯುನಿಸಂಗಳು ಯಾವ ನಂಬಿಕೆಗಳ ಆಧಾರದ ಮೇಲೆ ರೂಪುಗೊಂಡವೋ, ಆ ನಂಬಿಕೆಗಳನ್ನು ತಿರಸ್ಕರಿಸುತ್ತಾ; ಆರ್ಥಿಕ ಮತ್ತು ಸಾರ್ವತ್ರಿಕ ಗುರಿಗಳ ನಡುವಣ ತನ್ನದೇ ರೀತಿಯ ಸಮನ್ವಯ ಸಂಬಂಧವನ್ನು ಸಾಧಿಸಿಕೊಳ್ಳದ ಹೊರತು, ಭಾರತೀಯ ಸಮಾಜವಾದ ಯಾವುದೇ ಕಾಲಕ್ಕೂ ಪ್ರಸ್ತುತವಾಗದಂತಹ ಒಂದು ಅತಾರ್ಕಿಕ ಸಿದ್ಧಾಂತವಾಗಿ ಉಳಿಯುತ್ತದೆ.

– ಸಮಾಜವಾದಿ ಪಕ್ಷದ ಪಂಚಮಡಿ ವಿಶೇಷ ಅಧಿವೇಶನ ಕುರಿತ ವರದಿ, ೧೯೫೨

ನಮ್ಮ ಮೇಲಿನವರನ್ನು ಕುರಿತ ಕ್ರೋಧ ಮತ್ತು ಕೆಳಗಿನವರನ್ನು ಕುರಿತ ಮೌನ ಸಮಾಜವಾದವಾಗುವುದಿಲ್ಲ. ಸಹಾನುಭೂತಿಯ ಏಕತಾ ಭಾವ ಹಾಗೂ ಶೋಷಣೆ ವಿರುದ್ಧದ ಸಿಟ್ಟು ಸೇರಿದಾಗ ಮಾತ್ರ ಸರಿಯಾದ ಸಮಾಜವಾದ ಸೃಷ್ಟಿಯಾಗಬಲ್ಲದು. ಆದುದರಿಂದ ಸಮಾಜವಾದಿಗಳು ತಮ್ಮ ಹೆಜ್ಜೆ ಮತ್ತು ಮಾತುಗಳ ಬಗ್ಗೆ ಎಚ್ಚರದಿಂದಿರಬೇಕು.

–Marx, Gandhi and Socialism, ಪು.೩೫೨

ಸಮಾಜವಾದ ಎನ್ನುವುದು ಒಂದು ಜಾಗತಿಕ ಸಿದ್ಧಾಂತವಾಗದ ಹೊರತು ಅದು ಸಾರ್ಥಕವೆನಿಸುವುದಿಲ್ಲ. ಅದು ಹಾಗಾಗಬೇಕಾದರೆ, ಮೊದಲು ಅದರ ಮೇಲೆ ಹಲವಾರು ದಶಕಗಳ ಕಾಲ ಸೈದ್ಧಾಂತಿಕ ಒಡಕು-ಛಿದ್ರಗಳ ಪರಿಣಾಮವಾಗಿ ಬಿದ್ದಿರುವ ಹಲವು ಪದರಗಳ ಕಸ-ಧೂಳನ್ನು ಗುಡಿಸಿ, ಸಮಾಜವಾದಿ ಸಿದ್ಧಾಂತವನ್ನು ಸ್ವಚ್ಛಗೊಳಿಸಬೇಕಿದೆ. ಮತ್ತು ಈ ಕಾಲಾವಧಿಯಲ್ಲಿ ಅನ್ವೇಷಿಸಲಾಗಿರುವ, ಆದರೆ ಬಳಕೆಯಾಗದೆ ಉಳಿದಿರುವ ಸತ್ಯಗಳ ಮೂಲಕ ಅದನ್ನು ಸಂಪನ್ನಗೊಳಿಸಬೇಕಾಗಿದೆ. ಹಾಗೇ ಸಿದ್ಧಾಂತ ಮತ್ತು ವಾಸ್ತವಾಂಶಗಳ ನಡುವೆ ಪರಸ್ಪರತೆಯುನ್ನು, ವಾಸ್ತವಾಂಶಗಳು ಸಿದ್ಧಾಂತವನ್ನು ಪುನರ್ವಿನ್ಯಾಸಗೊಳಿಸುವ ಹಾಗೆ ಮತ್ತು ಅವು ಸಹ ಅದರಿಂದ ಪುನರ್‌ಪ್ರಸ್ತುತಗೊಳ್ಳುವ ಹಾಗೆ ಸ್ಥಾಪಿಸಬೇಕಿದೆ.

– ಸಮಾಜವಾದಿ ಪಕ್ಷದ ಎಂಟನೇ ರಾಷ್ಟ್ರೀಯ ಸಮ್ಮೇಳನದ ವರದಿ, ಬಾಂಬೆ, ೧೯೫೦

ಯೂರೋಪ್‌ನಿಂದ ಮೂಡಿರುವ ಬಹಳಷ್ಟು ಆಧುನಿಕ ಸಿದ್ಧಾಂತಗಳಂತೆಯೇ, ಇತಿಹಾಸದ ಭೌತವಾದಿ ನಿರೂಪಣೆಯೂ ಯಥಾಸ್ಥಿತಿವಾದದ-ಕನಿಷ್ಟ ಐರೋಪ್ಯ ವೈಭವವನ್ನು ಎತ್ತಿ ಹಿಡಿಯುವ ಯಥಾಸ್ಥಿತಿವಾದದ-ಭಾಗವೊಂದರ ಸೇವೆಯಲ್ಲಷ್ಟೇ ನಿರತವಾಗಿದೆ.

–Marx, Gandhi and Socialism, ಪು.೮೪

ಐರೋಪ್ಯ ಸಮಾಜವಾದದಲ್ಲಿ ನನಗೆ ಸಿದ್ಧಾಂತವೊಂದರ ವಿಜಯಕ್ಕೆ ಅಗತ್ಯವಾದ ಸ್ಥಳೀಯ ಕುಲಶೀಲವಾಗಲೀ, ಹುರುಪು ಉಲ್ಲಾಸಗಳಾಗಲೀ ಕಾಣಲಿಲ್ಲ. ಐರೋಪ್ಯ ಸಮಾಜವಾದಿಗಳು

ತಕ್ಷಣದ ಸಮಸ್ಯೆಗಳು ಮತ್ತು ತಮ್ಮ ದೇಶಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳ ಸಾಕ್ಷ್ಯ ಹಾಗೂ ಇಷ್ಟಾರ್ಥಗಳಲ್ಲಿ ಎಷ್ಟು ಮುಳುಗಿಹೋಗಿದ್ದಾರೆಂದರೆ ಅವರಿಗೆ ಒಂದು ಸಂಪೂರ್ಣ ಚಿತ್ರ ಮತ್ತು ಜಾಗತಿಕ ದೃಷ್ಟಿ ದಕ್ಕದೇ ಹೋಗಿದೆ.

–**Fragments of a World Mind**, ಪು.೧೧

ಐರೋಪ್ಯ ಸಮಾಜವಾದವು ಬಂಡವಾಳಶಾಹಿ ಪ್ರಜಾಪ್ರಭುತ್ವ ಮತ್ತು ರಷ್ಯ(ಅಥವಾ ಚೀನಾ) ಮಾದರಿಯ ಕಮ್ಯೂನಿಸಂಗಿಂತ ಭಿನ್ನವಾದ ತನ್ನದೇ ಆದ ಮುಖ ಚಹರೆ ಯನ್ನು ಪಡೆದುಕೊಳ್ಳಲು ವಿಫಲವಾಗಿರುವುದರಿಂದ ಅದು ತನ್ನ ಸಾಂಸ್ಥಿಕ ಮತ್ತು ಮಾನವತೆಯ ನೆಲೆಗಳಲ್ಲಿ ಮನುಷ್ಯ ವ್ಯಕ್ತಿತ್ವ ಮತ್ತು ಸಮಾಜವನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸುವಲ್ಲಿ ವಿಫಲವಾಗಿದೆ. ಜಗತ್ತಿನ ಸಮಾಜವಾದಿ ಪಕ್ಷಗಳು ಮತ್ತು ಅಂತಾರಾಷ್ಟ್ರೀಯ ಸಮಾಜವಾದಿ ಸಂಸ್ಥೆಯು ಹೊಸ ತಂತ್ರ ಹಾಗೂ ನೈತಿಕ ಬಲದ ಹೊಸ ಚೈತನ್ಯದೊಂದಿಗೆ ಸಮಾಜವಾದ ವನ್ನು ಪುನರುಜ್ಜೀವನಗೊಳಿಸುವ ಕೆಲಸವನ್ನು ಕೈಗೆತ್ತಿಕೊಳ್ಳಬೇಕಿದೆ.

-**Will for Power,** ಪುಟ ೯೧

ಸಮಾಜವಾದ ಕಡ ಪಡೆದ ಉಸಿರಿನ ಮೇಲೆ ಬದುಕುವುದನ್ನು ನಿಲ್ಲಿಸಬೇಕು. ಅದು ಬಹಳ ಕಾಲದಿಂದ ಕಮ್ಯೂನಿಸಂನಿಂದ ತನ್ನ ಅರ್ಥಿಕ ಗುರಿಗಳನ್ನೂ ಮತ್ತು ಬಂಡವಾಳಶಾಹಿ ಅಥವಾ ತನ್ನ ಉದಾರವಾದಿ ಯುಗದಿಂದ ತನ್ನ ಆರ್ಥಿಕೇತರ ಗುರಿಗಳನ್ನೂ ಕಡ ಪಡೆದುಕೊಂಡಿದೆ... ಸಮಾಜವಾದವು ಅತ್ಯುನ್ನತ ಮಟ್ಟ ಮುಟ್ಟಿದ ಬಂಡವಾಳಶಾಹಿ ಆರ್ಥಿಕತೆಗಳ ಅನಿವಾರ್ಯ ಪರಿಣಾಮ; ಅದನ್ನು

ಸಾಕಾರಗೊಳಿಸಲು ಅಗತ್ಯವಾಗಿರುವುದು ನಿರ್ದಯಿ, ನಿರ್ಭಾವುಕ ಸಂಕಲ್ಪಶಕ್ತಿಯಷ್ಟೇ ಎನ್ನುವ ಮಾರ್ಕ್ಸ್‌ವಾದಿ ನಂಬಿಕೆ ತಪ್ಪು ದಾರಿಗೆ ಎಳೆಯುವಂತಹದು. ಸಮಾಜವಾದದ ಅನಾವರಣಕ್ಕೆ ದೃಢ ಸಂಕಲ್ಪಶಕ್ತಿಯಷ್ಟೇ, ಬಂಡವಾಳಶಾಹಿಯನ್ನು ಹೊಸ ನೆಲೆಗಳಲ್ಲಿ ಅರ್ಥ ಮಾಡಿಕೊಳ್ಳುವ ಒಂದು ಮಹಾನ್ ಹೊಸ ಪ್ರಯತ್ನದ ಅಗತ್ಯವಿದೆ.

–Preface to Marx, Gandhi and Socialism, ಪು.೭೬–೭೭

ಬಂಡವಾಳಶಾಹಿ ಎನ್ನುವುದು ಇನ್ನಾವುದೇ ಸಮಾಜ ಶಾಸ್ತ್ರೀಯ ವಿದ್ಯಮಾನದಂತೆ ಒಂದು ಅಮೂರ್ತ ಸಂಗತಿಯಲ್ಲ. ಅದೊಂದು ಚಾರಿತ್ರಿಕ ವಿದ್ಯಮಾನ. ಅದನ್ನು ಅದರೆಲ್ಲ ಚಾರಿತ್ರಿಕ ಆಯಾಮಗಳೊಂದಿಗೇ ಅರ್ಥ ಮಾಡಿಕೊಳ್ಳಬೇಕಿದೆ.

–Marx, Gandhi and Socialism, ಪು.೯೬

ಸಾಮಾನ್ಯ ಗುರಿಗಳಿಂದ, ತಂತಾನೇ ಆರ್ಥಿಕ ಗುರಿಗಳೂ ಮೂಡುತ್ತವೆಂದು ಗಾಂಧಿವಾದಿ ಸಮಾಜಶಾಸ್ತ್ರಜ್ಞರು ಹೇಳುವಂತೆ ಆರ್ಥಿಕ ಗುರಿಗಳಿಂದ ತಂತಾನೇ ಸಾಮಾನ್ಯ ಗುರಿಗಳೂ ಮೂಡುತ್ತವೆಂದು ಸ್ಮಿತ್–ಮಾರ್ಕ್ಸ್ ಸಮಾಜಶಾಸ್ತ್ರಜ್ಞರು ನಂಬುತ್ತಾರೆ. ಈ ಒಂದರಿಂದ ಇನ್ನೊಂದು ತಂತಾನೇ ಮೂಡುವುದೆಂಬ ನಂಬಿಕೆ, ಚರಿತ್ರೆಯನ್ನು ಕಟ್ಟುವ ಮತ್ತು ಅರ್ಥ ಮಾಡಿಕೊಳ್ಳುವ ಕ್ರಿಯೆಯನ್ನು ವಿಕೃತಗೊಳಿಸಿದೆ. ಹಾಗಾದಾಗ ಪರಿಸರವು ತಲೆಕೆಳಗಾದ ಪ್ರಜ್ಞೆಯೂ, ಪ್ರಜ್ಞೆಯು ತಲೆಕೆಳಕಾದ ಪರಿಸರವೂ ಆಗಿಬಿಡುತ್ತದೆ.

-Wheel of History, ಪು.೧೭

ಪ್ರಜ್ಞೆ ಮತ್ತು ಪರಿಸರ ಅಥವಾ ಚೈತನ್ಯ ಮತ್ತು ವಸ್ತುಲೋಕದ ಸಂಬಂಧವನ್ನು ಅವೆರಡನ್ನೂ ಸ್ವಾಯತ್ತವೆಂದೇ ಪರಿಗಣಿಸಿ ನಿರೂಪಿಸಿಕೊಳ್ಳಬೇಕು. ಒಂದರಿಂದ ಇನ್ನೊಂದಲ್ಲ ಅಥವಾ ಎರಡೂ ಪರಸ್ಪರ ಸ್ವತಂತ್ರವೆಂದೂ ಅಲ್ಲ. ಅವೆರಡೂ ಜೊತೆ ಜೊತೆಯಲ್ಲೇ ಕ್ರಿಯಾಶೀಲವಾಗಿ, ಅಂದರೆ ಆರ್ಥಿಕ ಚಟುವಟಿಕೆ ಮತ್ತು ಪ್ರಜ್ಞೆಯ ಅಭಿವ್ಯಕ್ತಿಯ ಸಂಯೋಜನೆಯಾಗಿ ಚರಿತ್ರೆ ರೂಪುಗೊಂಡಿದೆ ಎಂಬ ಗ್ರಹಿಕೆಯೇ ಸೂಕ್ತ.

–Marx, Gandhi and Socialism, ಪು.೩೭೩

ಸಮಾಜವಾದಿಗಳು ಜಿಗುಟಾದ ತತ್ವಗಳಿಂದ ದೂರವಿರಬೇಕು. ವಸ್ತು–ಚೈತನ್ಯ, ವರ್ತಮಾನ–ಭವಿಷ್ಯ, ಧರ್ಮ–ಧರ್ಮಾತೀತತೆ, ವ್ಯಕ್ತಿ–ಸಮಾಜ, ಅನ್ನ–ಸ್ವಾತಂತ್ರ್ಯ ಇತ್ಯಾದಿ ದ್ವಂದ್ವಗಳ ನಡುವೆ ಕ್ರಿಯಾತ್ಮಕ ಏಕತೆಯನ್ನು ಸಾಧಿಸಿಕೊಳ್ಳುವ ಪ್ರಯತ್ನ ಮಾಡಬೇಕು.

–Marx, Gandhi and Socialism, ಪು.೩೭೦

ಸಮಾಜವಾದ ತನ್ನನ್ನು ಒಂದು ಕಡೆ ಗಾಂಧೀವಾದಿ ಅಥವಾ ಮಾರ್ಕ್ಸ್‌ವಾದಿ ಎಂದಾಗಲೀ, ಇನ್ನೊಂದು ಕಡೆ ಗಾಂಧಿವಾದ ವಿರೋಧಿ ಅಥವಾ ಮಾರ್ಕ್ಸ್‌ವಾದ ವಿರೋಧಿ ಎಂದಾಗಲೀ ಘೋಷಿಸಿಕೊಳ್ಳುವ ಅಗತ್ಯವಿಲ್ಲ. ಇಂತಹ ಮಾತೆಲ್ಲ ಅಪ್ರಸ್ತುತ. ಪ್ರಸ್ತುತವಾದುದು ಯಾವುದೆಂದರೆ, ಸರಿಯಾದ ಚಿಂತನೆ ಮತ್ತು ಸಮಗ್ರ ದೃಷ್ಟಿ.. ನಮ್ಮ ಮನಸ್ಸು ಸದಾ ಸತ್ಯದ ತಹತಹಿಕೆಯಲ್ಲಿರಬೇಕು;ಗಾಂಧೀ ಅಥವಾ ಮಾರ್ಕ್ಸ್ ಚಿಂತನೆಗಳಲ್ಲಿರುವ ಸತ್ಯಗಳೆಡೆಯ ತಹತಹಿಕೆ ಅದಾಗಿರಬೇಕು. ಪರಂಪರೆಯೊಂದಿಗೆ ತೊಡಕಿನದಾದ ಸಂಬಂಧ ಅಲ್ಲ; ಸತ್ಯದ ಇಂತಹ ತಹತಹಿಕೆಯ ಸಂಬಂಧ ಮಾತ್ರ ನಮಗೆ ನೆರವಾಗಬಹುದು.

–Marx, Gandhi and Socialism, ಪು.೩೬೬

ಮಾರ್ಕ್ಸ್‌ನ ಪ್ರಕಾರ ಬಂಡವಾಳಶಾಹಿಯು ಪಶ್ಚಿಮ ಯೂರೋಪ್ ವೃತ್ತದಲ್ಲೇ ಸ್ವಯಂ ಚಲಿಸುವ ವಿದ್ಯಮಾನವಾಗಿತ್ತು. ಅದು ಹೊರ ಜಗತ್ತಿನ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ಅವನ ವಿಶ್ಲೇಷಣೆ ಗಮನಿಸಿತ್ತಾದರೂ, ಅದರ ಚಲನೆ ಕುರಿತಂತೆ ಮಾರ್ಕ್ಸ್ ರೂಪಿಸಿದ್ದ ತತ್ವ ಮತ್ತು ನಿಯಮಗಳು ಪೂರ್ತಿ ಆಂತರಿಕವೇ ಆಗಿದ್ದವು. ಮಾರ್ಕ್ಸ್‌ವಾದ ಇಂದಿನವರೆಗೆ ಈ ಚೌಕಟ್ಟಿನಲ್ಲೇ ಸ್ಥಗಿತಗೊಂಡುಬಿಟ್ಟಿದೆ. ಅದು ಬಾಹ್ಯಾಂತರ ಪರಿಣಾಮಗಳ ಬಗ್ಗೆ ನಿಯಮಗಳನ್ನು ರೂಪಿಸುತ್ತಿದೆಯಾದರೂ, ಬಂಡವಾಳದ ಆಂತರಿಕ ಮತ್ತು ಬಾಹ್ಯ ಚಲನೆಗಳ ನಡುವಣ ಸಂಬಂಧ ಕುರಿತಂತೆ ಒಂದು ಮೂಲತತ್ವವನ್ನು ನಿರೂಪಿಸಲು ಅದಕ್ಕೆ ಇದುವರೆಗೆ ಸಾಧ್ಯವಾಗಿಲ್ಲ.

–Marx, Gandhi and Socialism, ಪು.೧೬

ಜಗತ್ತಿನ ಮೂರನೇ ಎರಡು ಭಾಗದಲ್ಲಿ ನರಕ ಸದೃಶ ಬಡತನವಿದೆ. ಬಂಡವಾಳಶಾಹಿಯು ಸಾಮ್ರಾಜ್ಯಶಾಹಿಯೊಂದಿಗೆ, ಯಜಮಾನ ದೇಶಗಳಲ್ಲಷ್ಟೇ ತನ್ನೆಲ್ಲ ಪ್ರಗತಿಶೀಲತೆಯನ್ನು ಕ್ರಿಯಾಶೀಲಗೊಳಿಸುವಂತಹ;ಆದರೆ, ಎಲ್ಲ ನೋವು ಸಂಕಷ್ಟಗಳೂ ಗುಲಾಮ ದೇಶಗಳಲ್ಲಿ ಮಾತ್ರ ಉಂಟಾಗುವಂತಹ ಒಪ್ಪಂದ ಮಾಡಿಕೊಂಡಂತೆ ತೋರುತ್ತದೆ.

–Marx, Gandhi and Socialism, ಪು.೯

ಪಶ್ಚಿಮ ಯೂರೋಪಿನ ಬಂಡವಾಳಶಾಹಿ ಆರ್ಥಿಕತೆಗಳು ಏಷ್ಯಾ ಮತ್ತು ಜಗತ್ತಿನ ಇತರ ಭಾಗಗಳ ದೇಶಗಳಿಂದ ಅಪಾರ ಪ್ರಮಾಣದ ಲಾಭವನ್ನು ಹೀರಿಕೊಂಡಿತ್ತು ಎಂಬುದರ ಅರಿವು ಮಾರ್ಕ್ಸ್‌ನಿಗೆ ಇತ್ತು. ಇದನ್ನು ಆತನ ಹಲವು ಹೇಳಿಕೆಗಳಲ್ಲಿ

ನೋಡಬಹುದು. ಆದರೆ ಇದೆಲ್ಲ ಆತನ ಮುಖ್ಯ ಸಿದ್ಧಾಂತಕ್ಕೆ ಅನುಬಂಧದಷ್ಟೇ ಇದೆ. ಅದು ಅವನ ಸಿದ್ಧಾಂತದ ಅವಿಭಾಜ್ಯ ಅಂಗವಾಗದೆ, ಪ್ರಾಣಿಯೊಂದರ ಬಾಲದಂತೆ ಕಾಣುತ್ತದೆ.

–Marx, Gandhi and Socialism, ಪು.೯೬

ರೈಲ್ವೇ ಅಭಿವೃದ್ಧಿ, ಭಾರತಕ್ಕೆ ವರವೇ ಎಂಬುದು ನಿಜವಾದ ಚರ್ಚೆಯ ವಿಷಯವೇ ಅಲ್ಲ. ವಾಸ್ತವದ ಸಂಗತಿ ಎಂದರೆ, ಬ್ರಿಟಿಷ್ ಆಳ್ವಿಕೆಯಲ್ಲಿನ ಭಾರತದ ರೈಲ್ವೇ ಇಲ್ಲದೆ, ಬ್ರಿಟಿಷ್ ರೈಲ್ವೇ ವ್ಯವಸ್ಥೆಗೆ ತನ್ನ ಆರಂಭಿಕ ಹಂತದಿಂದ ಮುಂದೆ ಸಾಗಲು ಸಾಧ್ಯವೇ ಇರಲಿಲ್ಲ. ರೈಲ್ವೇಯನ್ನು ಬ್ರಿಟಿಷರು ಭಾರತಕ್ಕೆ ಕೊಡಲಿಲ್ಲ; ಬದಲಿಗೆ ಭಾರತವು ಬ್ರಿಟಿಷರಿಗೆ ಅವರ ರೈಲ್ವೆ ಮತ್ತು ಇಂಜಿನಿಯರಿಂಗ್ ಕೈಗಾರಿಕೆಯನ್ನು ನೀಡಿತು.

–Marx, Gandhi and Socialism,
ಪು.೧೧(ಅಡಿ ಟಿಪ್ಪಣಿ)

ಜಾಗತಿಕ ವ್ಯಾಪಾರ, ವಿನಿಮಯಗಳ ಹಿಂದೆ ಭಾರತ, ಚೀನಾ, ಜಾವಾ, ಮಲಯ, ಆಫ್ರಿಕಾ, ದ.ಅಮರಿಕಾ ಹಾಗೂ ಇನ್ನಿತರ ಅನೇಕ ದೇಶಗಳ ಹಲವಾರು ತಲೆಮಾರುಗಳ ಕೃಷಿಕರು ಮತ್ತು ಗಣಿಕಾರರ ಅಗ್ಗದ ದುಡಿಮೆಯ ಪ್ರತಿಫಲ ಪದರ ಪದರವಾಗಿ ಕ್ರೋಢೀಕೃತವಾದ ಇತಿಹಾಸವಿದ್ದು, ಅದು ನಿರಂತರವಾಗಿ ಇಂಗ್ಲೆಂಡ್, ಜರ್ಮನಿ ಮತ್ತು ಜಪಾನ್‌ಗಳಲ್ಲಿ ಬೃಹತ್ ಯಂತ್ರ ವ್ಯವಸ್ಥೆಯಾಗಿ ರೂಪಾಂತರಗೊಂಡಿದೆ.

–Marx, Gandhi and Socialism,
ಪು.೨೩(ಅಡಿ ಟಿಪ್ಪಣಿ)

ಯಾವುದೇ ಒಂದು ದೇಶದ ಆರ್ಥಿಕ ಸಂರಚನೆಯನ್ನು ಒಂದು ಸ್ವಯಂಚಾಲಿತ ವ್ಯವಸ್ಥೆಯೆಂದು ನೋಡುವುದನ್ನು ಕೂಡಲೇ ನಿಲ್ಲಿಸಬೇಕು. ಅಂತೆಯೇ ಬಂಡವಾಳಶಾಹಿಯನ್ನು ಪಶ್ಚಿಮ ಯುರೋಪಿನ ಒಂದು ಸ್ವಯಂಚಾಲಿತ ವ್ಯವಸ್ಥೆಯನ್ನಾಗಿ ಪರಿಗಣಿಸಿದ ಮಾರ್ಕ್ಸ್‌ವಾದಿ ನಿರೂಪಣೆಯನ್ನೂ ನಾವು ಕೈಬಿಡಬೇಕು. ಬಂಡವಾಳಶಾಹಿಯು ತನ್ನ ಹುಟ್ಟಿನಿಂದ ಅತಿ ಇತ್ತೀಚಿನ ಬೆಳವಣಿಗೆಗಳ ತನಕ ಸಾಮ್ರಾಜ್ಯಶಾಹಿಯಿಂದ ತನ್ನ ಚೈತನ್ಯವನ್ನು ಪಡೆದೇ ಚಲಿಸಿದೆ.

–Marx, Gandhi and Socialism, ಪು.೨೫

ಕಣ್ಮುಂದೆ ಇಷ್ಟೊಂದು ವಾಸ್ತವಾಂಶಗಳು ಇದ್ದರೂ ಲೆನಿನ್ನರಾಗಲೀ, ಮತ್ತೊಬ್ಬರಾಗಲೀ, ಸಾಮ್ರಾಜ್ಯಶಾಹಿಯು ಬಂಡವಾಳಶಾಹಿಯ ಕೊನೆ ಹಂತ ಎಂದು ಹೇಗೆ ಹೇಳುವರೋ ತಿಳಿಯದು... ಇತಿಹಾಸದಲ್ಲಿ ಈವರೆಗೆ ಸಾಮ್ರಾಜ್ಯಶಾಹಿ ಇಲ್ಲದೆ ಬಂಡವಾಳಶಾಹಿ ಇರುವ ಯಾವ ಪ್ರಸಂಗವೂ ದಾಖಲಾಗಿಲ್ಲ.

–Marx, Gandhi and Socialism, ಪು.೧೩

ದೇಶ, ರಾಷ್ಟ್ರ, ಜನಾಂಗ, ಮಾತೃಭೂಮಿ ಈ ಕಲ್ಪನೆಗಳಷ್ಟು ರೋಚಕವಾದ ಬೇರೆ ಯಾವ ಕಲ್ಪನೆಗಳೂ ನಮ್ಮ ಕಾಲದಲ್ಲಿ ರೂಪುಗೊಳ್ಳಲಿಲ್ಲ. ಇನ್ನೊಂದು ದೇಶದ ಮೇಲೆ ದಂಡೆತ್ತಿ ಬಂದು ಲೂಟಿ ಮಾಡುವುದು, ಯುದ್ಧ ಮಾಡಿ ಗೆಲ್ಲುವುದು, ಅವುಗಳಿಂದ ಕಪ್ಪ ಕಾಣಿಕೆಗಳನ್ನು ವಸೂಲು ಮಾಡುವುದು–ಇವುಗಳೆಲ್ಲ ಹಳೆಯ ಕಾಲದ ದೊಡ್ಡ ಸೈನ್ಯಗಳ ಕಥೆಯಾಗಿ ಹೋಗಿವೆ.

ಹೊಸ ಬಗೆಯ ಹಲವಾರು ನಿಗೂಢ ಸಾಮ್ರಾಜ್ಯಶಾಹಿಗಳು ಈಗ ಕಾಣಿಸಿಕೊಳ್ಳುತ್ತಿವೆ. ಇದರಲ್ಲಿ ಬಹು ಮುಖ್ಯವಾದುದು

ಉತ್ಪಾದನೆಯ ಮತ್ತು ಬಳಕೆಯ ಸಾಮ್ರಾಜ್ಯಶಾಹಿ. ಚರಿತ್ರೆಯ
ಕೆಲವು ಆಕಸ್ಮಿಕಗಳ ದೆಸೆಯಿಂದ ಕೆಲವು ದೇಶಗಳು ಇತರ
ದೇಶಗಳಿಗಿಂತ ಹೆಚ್ಚು ಸಂಪನ್ಮೂಲಗಳನ್ನೂ, ಉತ್ಪಾದನಾ
ಸಾಮರ್ಥ್ಯವನ್ನೂ ಪಡೆದಿರುವುದರಿಂದ ಇದು ಸಾಧ್ಯವಾಗಿದೆ.

ನಮ್ಮ ಜಗತ್ತು ಈ ಎಲ್ಲ ಬಗೆಯ ಸಾಮ್ರಾಜ್ಯಶಾಹಿಗಳನ್ನು
ನಮ್ಮ ಎಲ್ಲ ಕ್ಷೇತ್ರಗಳಿಂದಲೂ ಹೊಡೆದಟ್ಟುವವರೆಗೆ ಈ
ಭೂಮಿಯಲ್ಲಿ ಯಾರಿಗೂ ನಿಜವಾದ ಸ್ವಾತಂತ್ರ್ಯವಾಗಲೀ
ಶಾಂತಿಯಾಗಲೀ ಸಿಗಲಾರದು.

–Marx, Gandhi and Socialism, ಪು.೩೭೦

ಯುರೋಪ್ ಕಳೆದ ಮೂರು ನೂರು ವರ್ಷಗಳಿಂದ
ಭೂಖಂಡಗಳಲ್ಲಿ ರಾಜಕುಮಾರನಂತಿದ್ದರೆ, ಇತಿಹಾಸದಲ್ಲಿ
ಭಾರತ ಕೂಡ ಬಹುಶಃ ಎರಡು ಬಾರಿ, ಖಂಡಿತವಾಗಿ ಒಂದು
ಬಾರಿಯಂತೂ ಆ ಸ್ಥಾನದಲ್ಲಿತ್ತು. ಗ್ರೀಸ್, ರೋಂ, ಚೀನಾ,
ಅರೇಬಿಯಾ ಮತ್ತು ಸ್ವಲ್ಪ ಮಟ್ಟಿಗೆ ಮೆಕ್ಸಿಕೋ ಕೂಡಾ ಆ ಶಿಖರ
ಸ್ಥಾನವನ್ನು ಅಲಂಕರಿಸಿದ್ದವು. ಉನ್ನತಿ ಮತ್ತು ಪತನಗಳು ಎಲ್ಲ
ಸಾಮಾಜಿಕ ಸಮೂಹಗಳ ಮತ್ತು ನಾಗರಿಕತೆಗಳ ಗುಣಲಕ್ಷಣಗಳೇ
ಆಗಿವೆ. ಇದಕ್ಕೆ ಈವರೆಗೆ ಅಪವಾದವೆಂಬುದೇ ಇಲ್ಲ.

-Wheel of History, ಪು.೩೮

ಸುವರ್ಣಯುಗದ ನುಡಿಗಟ್ಟಿನಲ್ಲಿ ಆಲೋಚಿಸಿರುವ
ಈವರೆಗಿನ ಇತಿಹಾಸಜ್ಞರು ಕ್ಷಣವನ್ನು ಅದರ ಪ್ರವಾಹ
ರೂಪದಲ್ಲಿಯೇ ನೋಡಿದ್ದಾರೆಯೇ ಹೊರತು, ಅದರ ಅನಂತತೆಯ
ಲಕ್ಷಣವನ್ನು ಮರೆತೇ ಬಿಟ್ಟಂತೆ ತೋರುತ್ತದೆ. ಹಾಗೇ ವೈಯಕ್ತಿಕ
ಚಾರಿತ್ರ್ಯ ಮತ್ತು ಆದರ್ಶಗಳ ಪಾವಿತ್ರ್ಯದ ಬಗೆಗೆ ಉಪದೇಶ

ನೀಡುವವರು ಕ್ಷಣವನ್ನು ಅನಂತತೆಯ ರೂಪದಲ್ಲಷ್ಟೇ ನೋಡಿ, ಅದರ ಪ್ರವಾಹೀ ಲಕ್ಷಣವನ್ನು ಮರೆತುಬಿಟ್ಟಿದ್ದಾರೆನಿಸುತ್ತದೆ.

-Wheel of History, ಪು.೭೫

ಮನುಷ್ಯನ ಆಯ್ಕೆಯ ಸ್ವಾತಂತ್ರ್ಯ ಹಾಗೂ ವಿಧಿವಾದ ಇವುಗಳ ನಡುವೆ ಯಾವುದಾದರೊಂದನ್ನು ಒಪ್ಪುವ ಅಗತ್ಯವೇನೂ ಇಲ್ಲ. ಜಗತ್ತು ಪೂರ್ವನಿಶ್ಚಿತವಾದುದೇ ಇರಬಹುದು. ಆದರೆ ಮನುಷ್ಯ ಈ ಪೂರ್ವನಿಶ್ಚಿತತೆಯ ನಿಯಮಗಳನ್ನು ಕಂಡಿಹಿಡಿಯಬಲ್ಲನೋ ಎಂಬುದು ಇಲ್ಲಿ ಮುಖ್ಯ. ಜ್ಞಾನದ ಹೊಸ ಎಲ್ಲೆಗಳು ಅಜ್ಞಾನದ ಹೊಸ ಹೊಸ ಎಲ್ಲೆಗಳಾಗಿ ಮಾರ್ಪಡುವ ಸೋಜಿಗವನ್ನು ನಾವು ನೋಡುತ್ತಿದ್ದೇವೆ. ಅಂದ ಮಾತ್ರಕ್ಕೆ ಹೊಸ ಹೊಸ ಸಂಶೋಧನೆಗಳು ನಮ್ಮ ಜ್ಞಾನ ಪರಿಸ್ಥಿತಿಯಲ್ಲಿ ವ್ಯತ್ಯಾಸವನ್ನೇನೂ ಉಂಟು ಮಾಡುತ್ತಿಲ್ಲ ಎಂದಲ್ಲ. ಆದರೆ ಇಂತಹ ಸಂಶೋಧನೆಗಳಿಂದ ಜ್ಞಾನದ ಸಂಪೂರ್ಣತೆಯನ್ನು ಸಾಧಿಸಲಾಗದು ಎಂದಷ್ಟೇ ನಾನು ಹೇಳುತ್ತಿರುವುದು. ಅದಕ್ಕಾಗಿ ಮನುಷ್ಯ ಬೇರೆ ಮಾರ್ಗಗಳನ್ನೇ ಹುಡುಕಬೇಕಾಗಿದೆ. ಆತ ತನ್ನ ಆಸೆ-ನಿರೀಕ್ಷೆಗಳ ಎಲ್ಲ ಮೊಟ್ಟೆಗಳನ್ನೂ ಅಸಾಧ್ಯವಾದ ಭವಿಷ್ಯದ ಪೂರ್ಣ ಜ್ಞಾನದ ಬುಟ್ಟಿಯಲ್ಲಿಡುವ ಬದಲು, ಸಮಗ್ರ ಗ್ರಹಿಕೆ ಮತ್ತು ಅನುಭವಕ್ಕೆ ಎಂದೂ ಸಿಗದೆ ಸದಾ ಅಪೂರ್ಣವಾಗಿಯೇ ಉಳಿಯುವ ವರ್ತಮಾನದಲ್ಲಿಯೇ ಈ ಹುಡುಕಾಟ ನಡೆಸಬೇಕಿದೆ.

-Marx, Gandhi and Socialism, ಪು: ೩೭೩

ಎಲ್ಲ ಅಸ್ತಿತ್ವವೂ ಆಗುತ್ತಿರುವ ಸ್ಥಿತಿಯಲ್ಲಿರುವುದು. ಈ ಆಗುವಿಕೆಯಲ್ಲಿಯೇ ಅಸ್ತಿತ್ವದ ಒಂದು ಆಕಾರ ರೂಪು

ತಳೆಯುತ್ತಿರುತ್ತದೆ. ಪ್ರತಿಯೊಂದು ಕ್ಷಣವೂ ಈ ಆಗುವ ಸರಪಳಿಯ(ಕಾಲ ಪ್ರವಾಹದ) ಒಂದು ಕುಣಿಕೆ. ಹಾಗೇ ಈ ಪ್ರತಿಕ್ಷಣವೂ ಅನಂತತೆಯ (ಆದಿ ಅಂತ್ಯಗಳಿಲ್ಲದ ಕಾಲದ ನಿರಂತರತೆಯ) ಪ್ರತಿರೂಪ ಕೂಡಾ. ಆದರೆ ಈ ಯುಗವು ಆಗುವ ಪ್ರಕ್ರಿಯೆಯಲ್ಲಿನ ಮಾನವ ಸಾಧನೆಗಳ ಬಗೆಗೆ ಕೊಟ್ಟಷ್ಟು ಗಮನವನ್ನು, ಈ ಪ್ರಕ್ರಿಯೆಯ ಹಿನ್ನೆಲೆಯಲ್ಲಿರುವ ಅವನ ಅಸ್ತಿತ್ವದ(ಅನಂತತೆಯ) ಆಯಾಮಗಳ ಕಡೆ ಗಮನ ಕೊಟ್ಟಿಲ್ಲ. ನಾವು ಕಾಲದ ಈ ಅದ್ವೈತ ಸ್ವರೂಪವನ್ನು (ಕ್ಷಣವು ಪ್ರವಾಹ ರೂಪದಲ್ಲಿ ಭೌತವಾಗಿಯೂ, ಅನಂತತೆಯ ರೂಪದಲ್ಲಿ ಅಭೌತ ಅಥವಾ ಆಧ್ಯಾತ್ಮಿಕವಾಗಿಯೂ ಕಾಣಿಸಿಕೊಳ್ಳುತ್ತಾ ಚರಿತ್ರೆಯನ್ನು ನಿರ್ಮಿಸುತ್ತಾ ಹೋಗುತ್ತದೆಂಬುದನ್ನು) ಅರ್ಥ ಮಾಡಿಕೊಳ್ಳದೆ, ಅದನ್ನು ಭೌತ-ಅಭೌತವೆಂದು ವಿಭಜಿಸಿ ವಿಶ್ಲೇಷಿಸುತ್ತಾ, ಜಗತ್ತಿನ ಸಮಗ್ರ ಗ್ರಹಿಕೆಗೆ ತೊಂದರೆಯನ್ನುಂಟು ಮಾಡಿಕೊಂಡಿದ್ದೇವೆ.

- **Marx, Gandhi and Socialism,** ಪು: ೩೭೩

ಸಮಾಜವೊಂದರಲ್ಲಿ ಎಲ್ಲಿಯವರೆಗೆ ದಕ್ಷತೆ ಬೆಳೆಯುತ್ತಿರು ವುದೋ ಅಲ್ಲಿಯವರೆಗೆ ಆರೋಗ್ಯ, ಹುರುಪು ಮತ್ತು ಸಾರ್ವತ್ರಿಕ ಸಂಚಲನವಿದ್ದು, ಆಂತರಿಕವಾಗಿ ಜನತೆಯ ವಿವಿಧ ಗುಂಪುಗಳು ತಂತಮ್ಮ ಸ್ಥಿತಿಗತಿಗಳನ್ನು ಸುಧಾರಿಸಿಕೊಳ್ಳಲು ವರ್ಗ ಸಂಘರ್ಷ ವೊಂದರಲ್ಲಿ ತೊಡಗಿರುತ್ತವೆ. ಹಾಗೇ ಅದೇ ಸಮಯದಲ್ಲಿ ಬಾಹ್ಯವಾಗಿ ಅವು ಹೊರಗಿನ ಒತ್ತಡಗಳನ್ನು ತಡೆದುಕೊಳ್ಳು ವುದಷ್ಟೇ ಅಲ್ಲ, ಬೇರೆ ಸಮಾಜಗಳಿಂದ ಸತ್ವವನ್ನು ಪಡೆಯಲೂ ಮುಂದಾಗುತ್ತವೆ. ಯಾವಾಗ ದಕ್ಷತೆ ಗರಿಷ್ಠ ಮಟ್ಟ ಮುಟ್ಟಿ ಮುಂದೆ ದಾರಿ ಕಾಣದಂತಾಗುವುದೋ, ಆಗ ವರ್ಗ ಸಂಘರ್ಷದ ಕಾವು ಅಸಹನೀಯವಾಗಿ; ಅದನ್ನು ನಿವಾರಿಸಿಕೊಳ್ಳಲು ಒಂದು

ನ್ಯಾಯಾಧಾರಿತ ಜಾತಿ ಪದ್ಧತಿಯನ್ನು ರೂಪಿಸಿಕೊಳ್ಳುವ ಪ್ರಯತ್ನ ನಡೆಯುತ್ತದೆ ಮತ್ತು ಇತರ ಸಮಾಜಗಳೊಡನೆಯ ಬಾಹ್ಯ ಸಂಘರ್ಷ ಹೆಚ್ಚು ಸಂಕಟಮಯವೂ, ತಾಳಿಕೊಳ್ಳಬಹುದಾದ ಮಿತಿಗಳನ್ನೂ ಮೀರುತ್ತದೆ. ಅಂತಹ ಪರಿಸ್ಥಿತಿಯಲ್ಲಿ ನಾಗರಿಕತೆಯೊಂದರ ಹಿನ್ನಡೆ ಅಥವಾ ಪತನ ಅನಿವಾರ್ಯವಾಗುತ್ತದೆ.

-Wheel of History, ಪು.೨೬-೨೭

ಜಾತಿ ಅಂದರೆ ಸ್ಥಗಿತಗೊಂಡ ವರ್ಗ. ಹಾಗೇ, ವರ್ಗವೆಂದರೆ ಚಲನಶೀಲ ಜಾತಿ. ಜಾತಿ ಮತ್ತು ವರ್ಗಗಳ ನಡುವಣ ತುಯ್ದಾಟ ಮಾನವ ಇತಿಹಾಸದ ಈವರೆಗಿನ ನಿಯಮವಾಗಿದೆ. ಆದರೆ ಇತರೆಲ್ಲ ಕಡೆ ವಿವಿಧ ಪ್ರಮಾಣದ ಸ್ಥಗಿತತೆ ಮತ್ತು ಚಲನಶೀಲತೆ ಕಂಡು ಬಂದಿದ್ದರೆ, ಭಾರತದಲ್ಲಿ ಮಾತ್ರ ಜಾತಿಯ ಸ್ಥಗಿತತೆ ಶಾಶ್ವತವಾಗಿಬಿಟ್ಟಿದೆ.

-Marx, Gandhi and Socialism, ಪು: XXXIII

ಹಿಂದಿನ ಯಾವ ನಾಗರೀಕತೆಯೂ ತನ್ನ ಮೂಲ ದಿಕ್ಕಿನಲ್ಲಿ ಸಾಧಿಸಿಕೊಂಡ ಗರಿಷ್ಠ ದಕ್ಷತೆ ಸರ್ವ ದಿಕ್ಕುಗಳಲ್ಲೂ ಬೆಳೆಯುವಂತೆ ನೋಡಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಹೀಗೆ ಸಂಪೂರ್ಣ ದಕ್ಷತೆಯನ್ನು ಸಾಧಿಸಿಕೊಳ್ಳುವ ನಾಗರೀಕತೆ ಇಡೀ ಜಗತ್ತಿನ ಜನತೆಯನ್ನು ಮತ್ತು ಅದರಲ್ಲಿನ ಮನುಷ್ಯನ ಇಡೀ ವ್ಯಕ್ತಿತ್ವವನ್ನು ವ್ಯಾಪಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಈ ಹಿಂದಿನ ನಾಗರೀಕತೆಗಳೆಲ್ಲವೂ, ಈ ಎರಡೂ ನೆಲೆಗಳಲ್ಲಿ ಸೋತಿವೆ. ಅವೇನಿದ್ದರೂ, ತಾನು ಹುಟ್ಟಿದ ನೆಲದ ವಿಶಿಷ್ಟ ಜನತೆಯ ಮಟ್ಟಿಗೆ ಗರಿಷ್ಠ ದಕ್ಷತೆ ಸಾಧಿಸಿ ಅದರ ಮೂಲಕ ತನ್ನ ಹೊರಗಿನ ನಾಡಿನ ಜನತೆಯನ್ನು ಮಣಿಸುವ ಪ್ರಯತ್ನಗಳನ್ನಷ್ಟೇ

ಮಾಡಿವೆ. ಹೀಗಾಗಿ, ಪ್ರಾದೇಶಿಕ ಅಧಿಕಾರ ಮತ್ತು ಸಂಪತ್ತುಗಳ ಪಲ್ಲಟಗಳನ್ನು ನಿಲ್ಲಿಸಿ, ನಾಡಿನ ಗಡಿಗಳನ್ನು ಅಳಿಸಬಲ್ಲ ಜಾಗತಿಕವೆನ್ನಬಹುದಾದ ನಾಗರೀಕತೆ ಬೆಳೆಯಲೇ ಇಲ್ಲ.

ಇದರಿಂದಾಗಿ ಯಾವ ನಾಗರೀಕತೆಯೂ, ಸಮೂಹ ವೊಂದರ ಗರಿಷ್ಟ ದಕ್ಷತೆಗೆ ಹೊರತಾದ ವ್ಯಕ್ತಿಯ ಇತರೆ ವಿಶಿಷ್ಟ ದಕ್ಷತೆಗಳನ್ನು ಗುರುತಿಸುವ, ಬೆಳೆಸುವ ಮತ್ತು ಬಳಸುವ ಸಾಧ್ಯತೆಯೇ ಉಂಟಾಗಲಿಲ್ಲ. ಆದುದರಿಂದ ವ್ಯಕ್ತಿಯ ಸಂಪೂರ್ಣ ವ್ಯಕ್ತಿತ್ವದ ವಿಕಾಸಕ್ಕೆ ಅವಕಾಶವೇ ಸಿಕ್ಕಿಲ್ಲ. ಹಾಗೇ, ಆಧುನಿಕ ನಾಗರೀಕತೆಗೂ ತನ್ನ ಸಾಧನೆಗಳನ್ನು ಜಗತ್ತಿನ ಎಲ್ಲ ಜನತೆಗೆ ಮುಟ್ಟಿಸಲು ಮತ್ತು ವ್ಯಕ್ತಿಯ ಎಲ್ಲ ಪಕ್ಕಗಳನ್ನೂ ಮುಟ್ಟಲು ಸಾಧ್ಯವಾಗಿಲ್ಲ.

ಆದರೆ ಇಂದು ಮಾನವ ಗರಿಷ್ಟ ದಕ್ಷತೆಯನ್ನು ಮುಟ್ಟಿ ಮುಗ್ಗರಿಸುವ ಬದಲಾಗಿ, ಸಂಪೂರ್ಣ ದಕ್ಷತೆಯ ಕಡೆ ಮುಖ ಮಾಡಿರುವ ನಾಗರೀಕತೆಯೊಂದನ್ನು ಕಟ್ಟುವ ಸಾಧ್ಯತೆಗಳನ್ನು ಮನಗಂಡಿರುವಂತಿದೆ. ಅವನು ಇತಿಹಾಸ ಚಕ್ರದ ಕೀಲು ಮುರಿಯುವ ಸಾಹಸಕ್ಕಿಳಿದಿದ್ದಾನೆ. ಜಾತಿ–ವರ್ಗಗಳನ್ನು ನಿವಾರಿಸಿಕೊಂಡು ಮತ್ತು ತುಲನಾತ್ಮಕವಾದ ಸಮಾನ ಉತ್ಪಾದನೆ ಯನ್ನು ಸಾಧಿಸಿಕೊಳ್ಳುವ ಮೂಲಕ ಅಧಿಕಾರ ಹಾಗೂ ಸಂಪತ್ತು ಗಳ ಪ್ರಾದೇಶಿಕ ಪಲ್ಲಟಗಳಿಗೆ ಅಂತ್ಯ ಹಾಡಿ, ಮಾನವ ಜನಾಂಗದ ಸಮೀಪೀಕರಣದ ಹೊಸ ನಾಗರೀಕತೆಯೊಂದನ್ನು ಸೃಷ್ಟಿಸುವ ತವಕದಲ್ಲಿದ್ದಾನೆ.

–**Wheel of History,** ಪು: ೭೮–೮೬

•

ಹೊಸ ಸಮಾಜವಾದಿ ನಾಗರೀಕತೆ ಜಗತ್ತಿನ ಎಲ್ಲ ಜನಾಂಗಗಳ ದೈಹಿಕ ಮತ್ತು ಸಾಂಸ್ಕೃತಿಕ ಸಮೀಪಕರಣವನ್ನು

ಸಾಧಿಸುವ ಮೂಲಕ ಮಿಶ್ರ ಜನಾಂಗವೊಂದು ಜಗತ್ತಿನ ತುಂಬಾ ಹಬ್ಬುವ ದಿನವನ್ನು ಎದುರು ನೋಡುತ್ತಿದೆ.

–**Mankind,** ಸೆಪ್ಟಂಬರ್ ೧೯೬೮

ಈಗಲೂ ಜಗತ್ತಿನಲ್ಲಿ ಪ್ರಜೆತನವನ್ನು ಬರೀ ದೈಹಿಕ ನೆಲೆಯಲ್ಲಿನ ಹುಟ್ಟು ಅಥವಾ ಒಂದು ಕಾಲಾವಧಿಯ ವಾಸದಿಂದ ದತ್ತವಾಗುವ ದೈಹಿಕ ಲಕ್ಷಣಗಳ ಆಧಾರದ ಮೇಲೆ ನಿರ್ಧರಿಸ ಲಾಗುತ್ತಿದೆ... ಉಪನಿಷತ್ತುಗಳು ಮತ್ತು ಮಹಾತ್ಮಗಾಂಧಿಯ ನಾಡಿನಲ್ಲಿ ಪ್ರಜೆತನವನ್ನು ನಿರ್ಧರಿಸಲು ಆಧಾರಗಳಾಗಲೇ ಬೇಕಾದ ಮಾನಸಿಕ ಅಥವಾ ಭಾವನಾತ್ಮಕ ಬಂಧುತ್ವದ ಲಕ್ಷಣ ಗಳನ್ನು ಈಗಲೂ ಪರಿಗಣಿಸಿಯೇ ಇಲ್ಲ. ನಾವು ಇತರ ವಿಷಯಗಳಲ್ಲಿ ಮಾಡಿದಂತೆ ಇದರಲ್ಲೂ ಪಶ್ಚಿಮವನ್ನು ನಕಲು ಮಾಡಿದ್ದೇವೆ.

-**Mankind,** ಮೇ ೧೯೬೭ರಲ್ಲಿ ಪ್ರಕಟವಾದ
ಲೋಕಸಭಾ ಭಾಷಣ, ಮಾರ್ಚ್ ೩೧, ೧೯೬೭

ಎಲ್ಲಿಯಾದರೂ ಪ್ರಯಾಣ ಮಾಡುವ, ಕೆಲಸ ಮಾಡುವ ಮತ್ತು ಸಾಯುವ ಮನುಷ್ಯನ ಆಜನ್ಮ ಹಕ್ಕನ್ನು ಮಾನ್ಯ ಮಾಡಬೇಕು ಹಾಗೂ ಈ ಹಕ್ಕನ್ನು ದೇಶೀಯತೆ ಅಥವಾ ಅಪೇಕ್ಷಣೀಯತೆಗಳ ಆಧಾರದ ಮೇಲೆ ನಿರ್ಬಂಧಿಸುವುದನ್ನು ನಿಲ್ಲಿಸಬೇಕು. ಪ್ರಜೆತನವು ಹುಟ್ಟು ಅಥವಾ ನಿವಾಸದಂತೆಯೇ ಉದ್ದೇಶ ಮತ್ತು ಸಾಂಸ್ಕೃತಿಕ ಒಲವು ನಿಲುವುಗಳನ್ನು ಆಧರಿಸಿರಬೇಕು.

–**Marx, Gandhi and Socialism,** ಪು.೪೬೯

ವಿಶ್ವಸಂಸ್ಥೆಯಲ್ಲಿ ಕೆಲವು ರಾಷ್ಟ್ರಗಳಿಗೆ ನೀಡಲಾಗಿರುವ ಶಾಶ್ವತ ಸ್ಥಾನ ಮತ್ತು ವಿಟೋ ಅಧಿಕಾರಗಳು ಜಗತ್ತನ್ನು ಬೃಹತ್

ಮತ್ತು ಸಣ್ಣ ಶಕ್ತಿಗಳನ್ನಾಗಿ ವಿಭಜಿಸಿರುವುದರ ಪ್ರತೀಕಗಳೇ ಆಗಿವೆ. ಇದೊಂದು ರೀತಿಯ ಅಂತಾರಾಷ್ಟ್ರೀಯ ಜಾತಿ ಪದ್ಧತಿಯೇ ಆಗಿದೆ. ಸದಸ್ಯತ್ವಕ್ಕಾಗಿ ನಿರ್ಬಂಧಗಳನ್ನು ಹೇರುವ ಮೂಲಕ ಸಂಕುಚಿತ ಹಿತಾಸಕ್ತಿಗಳಿಗಾಗಿ ಕ್ಷುಲ್ಲಕ ರಾಜಕೀಯಕ್ಕೆ ಆಸ್ಪದ ಮಾಡಿಕೊಟ್ಟಂತಾಗುತ್ತದೆ.

-Will to Power, ಪು.೮೦

ಉದಾರವಾದಿ ಮತ್ತು ಶ್ರಮವಾದಿ- ಈ ಎರಡೂ ಜಗತ್ತುಗಳಿಗೆ ಈವರೆಗೆ ಗೊತ್ತಿರುವುದು ಎರಡು ಸ್ತಂಭಗಳ ರಾಜ್ಯ ವ್ಯವಸ್ಥೆ ಮಾತ್ರ. ಒಗ್ಗೂಡಿಸುವ ಕೇಂದ್ರ ಹಾಗೂ ಅದನ್ನು ಸಮಗ್ರೀಕರಿಸುವ ಘಟಕಗಳು, ಈ ಎರಡು ಅಂಗಗಳಿಗೆ ರಾಜ್ಯವ್ಯವಸ್ಥೆಯ ಕೆಲಸಗಳು ಮತ್ತು ಅಧಿಕಾರಗಳನ್ನು ವಿಭಜಿಸಿ ನೀಡುವುದು ಹೇಗೆ ಎಂಬುದರ ಬಗ್ಗೆ ಸಂವೈಧಾನಿಕ ಸಿದ್ಧಾಂತಗಳನ್ನು ರೂಪಿಸಲಾಗುತ್ತಿದೆ ಹಾಗೂ ಅವುಗಳ ವ್ಯಾಪಕ ಅನ್ವಯಗಳನ್ನು ನಿರಂತರವಾಗಿ ಪುನರ್‍ರೂಪಿಸುವ ಪ್ರಯತ್ನ ಮಾಡಲಾಗುತ್ತಿದೆ. ಆದರೆ ಅಧಿಕಾರದ ನಿಜವಾದ ವಿಭಜನೆ ಎಂದರೆ, ರಾಜ್ಯದ ಸಮಗ್ರತೆ ಹಾಗೂ ಏಕತೆಯನ್ನು ಕಾಪಾಡಲು ಅಗತ್ಯವಾದಷ್ಟು ಮಾತ್ರ ಅಧಿಕಾರಗಳನ್ನು ಕೇಂದ್ರಕ್ಕೆ ನೀಡಿ, ಉಳಿದವನ್ನು ಮೂರು ಹಂತಗಳಲ್ಲಿ-ಪ್ರಾಂತ್ಯ, ಜಿಲ್ಲೆ ಮತ್ತು ಗ್ರಾಮ-ಹಂಚುವುದೇ ಆಗಿದೆ.

–Marx, Gandhi and Socialism, ಪು. ೨೮೬

ಸಣ್ಣ ಸಮುದಾಯಗಳು ನೇರ ಪ್ರಜಾಪ್ರಭುತ್ವದ ಕ್ರಿಯಾಶೀಲತೆಯಲ್ಲಿ ಭಾಗವಹಿಸಿ ಸೂಕ್ತ ಅಧಿಕಾರಗಳನ್ನು ಹೊಂದುವ ಮೂಲಕ ತಮ್ಮ ಭವಿಷ್ಯವನ್ನು ತಾವೇ ನಿರ್ಮಿಸಿಕೊಳ್ಳ

ವಂತಾಗಬೇಕು. ಹೀಗಾಗಾದಿದ್ದರೆ, ಪುರಾತನ ನಾಗರೀಕತೆಯೊಂದು ಜೀವಂತಿಕೆ ಮತ್ತು ಭರವಸೆಗಳ ಹೊಸ ರೂಪಗಳಲ್ಲಿ ಮರುಹುಟ್ಟು ಪಡೆಯಲಾರದು.

–Marx, Gandhi and Socialism, ಪು. ೪೧೯

ಭಾರತದಲ್ಲಿ ಹಳ್ಳಿಗಳ ಸ್ವಾವಲಂಬನೆಯ ವಿಷಯವನ್ನು ಕೈಬಿಟ್ಟರೆ ಒಳ್ಳೆಯದು. ಅದು ಸದ್ಯಕ್ಕೆ ಅವ್ಯಾವಹಾರಿಕವಾದದ್ದು. ಹಳ್ಳಿಗಳು ತನ್ನ ಸುತ್ತಲಿನ ಹಲವು ಹಳ್ಳಿಗಳೊಂದಿಗೆ ಮಾತ್ರವಲ್ಲ, ವಿಶ್ವದ ಜೊತೆಗೂ ನಿಕಟ ಸಂಬಂಧದಲ್ಲಿರಬೇಕು.

–Marx, Gandhi and Socialism, ಪು. ೧೩೧-೧೩೨

ಹೊಸ ಸಮಾಜವಾದದ ಅವಿಭಾಜ್ಯ ಅಂಗವಾಗಿರುವ ಅಧಿಕಾರ ವಿಕೇಂದ್ರೀಕರಣದ ಆಶಯವುಳ್ಳ ಚತುಸ್ತಂಭ ರಾಷ್ಟ್ರದ ಕಲ್ಪನೆಯ ವಿಸ್ತರಣೆಯಾಗಿ ನಾನು ವಿಶ್ವ ಸಂಸತ್ತು ಮತ್ತು ವಿಶ್ವ ಸರ್ಕಾರಗಳ ಕಲ್ಪನೆಯನ್ನು ಅರ್ಥೈಸಬಯಸುತ್ತೇನೆ. ಇಂತಹ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂದುದೇ ಆದರೆ, ಅದು ಅಂತಾರಾಷ್ಟ್ರೀಯ ವಿವಾದಗಳ, ಜಗಳಗಳ ಇತ್ಯರ್ಥ ವೇದಿಕೆಯಷ್ಟೇ ಆಗದೆ, ಮಾನವ ಜನಾಂಗದ ಆತ್ಮ ಸಾಕ್ಷಿಯ ಉತ್ತಮತರ ಸಂರಕ್ಷಕನಂತೆ ಕೆಲಸ ಮಾಡಬಹುದೆಂದು ನಾನು ಭಾವಿಸುತ್ತೇನೆ. ಹಾಗಾಗಿ ಅದು ರಾಷ್ಟ್ರಗಳ ಮೇಲೆ ಹೆಚ್ಚಿನ ನೈತಿಕ ಅಧಿಕಾರ ಅಥವಾ ಜಾಗತಿಕ ಅಭಿವೃದ್ಧಿ ಪ್ರಾಧಿಕಾರದ ರಚನೆಯ ಪ್ರಯತ್ನಗಳನ್ನು ಕೈಗೊಳ್ಳುತ್ತದೆ ಎಂದು ನಾನು ಆಶಿಸುವೆ.

–Marx, Gandhi and Socialism, ಪು.೪೬೪

ಕಮ್ಯೂನಿಸಂ, ಶೋಷಣೆಯನ್ನು ಅಂತ್ಯಗೊಳಿಸುವುದ
ರಿಂದ ರಾಷ್ಟ್ರಗಳ ನಡುವೆ ಸಮಾನತೆ ಹಾಗೂ ವ್ಯಕ್ತಿತ್ವದ ಪೂರ್ಣ
ವಿಕಾಸ-ಈ ಎರಡನ್ನು ಆಧರಿಸಿದ ಜಾಗತಿಕ ವ್ಯವಸ್ಥೆಯ ಬಗ್ಗೆ
ಮಾತಾಡುತ್ತದೆ, ನಿಜ. ಆದರೆ ಈ ಸಾರ್ವತ್ರಿಕ ಆದರ್ಶಗಳು
ಪರಿಪೂರ್ಣ ಸ್ಪರ್ಧೆಯ ಮೂಲಕ ಹುಟ್ಟುವ ಇಂತಹುದೇ
ಜಾಗತಿಕ ವ್ಯವಸ್ಥೆ ಬಗ್ಗೆ ಬಂಡವಾಳಶಾಹಿ ಆಡಿದ್ದ ಮಾತು
ಗಳಂತೆಯೇ ಹುಸಿಯೂ ಮತ್ತು ಅರ್ಥಹೀನವೂ ಆಗಿವೆ. ಈ
ಸಾರ್ವತ್ರಿಕ ಆಕಾಂಕ್ಷೆಗಳನ್ನು ಮೂರ್ತ ಆದರ್ಶಗಳನ್ನಾಗಿ
ಮಾಡಲು ಈ ಎರಡು ಸಿದ್ಧಾಂತಗಳೂ ಪ್ರಯತ್ನಿಸಿಲ್ಲ.

-**Wheel of History**, ಪು.೮೪

ಅಭಿವ್ಯಕ್ತಿ ಸ್ವಾತಂತ್ರ್ಯ ಸಾಮಾನ್ಯವಾಗಿ ಸರಿ ಅಲ್ಲ ಎನಿಸುವ
ಮಾತನ್ನೂ ಆಡುವ ಹಕ್ಕನ್ನು ಒಳಗೊಂಡಿದೆ. ಯಾವುದು ಸರಿ
ಅಥವಾ ಸರಿಯಲ್ಲ ಅನ್ನುವುದನ್ನು ಜನತೆ ತೀರ್ಮಾನಿಸಲು
ಬಿಡಬೇಕು. ರಾಷ್ಟ್ರದ ಭದ್ರತೆ ಅಪಾಯದಲ್ಲಿದೆ ಎಂಬುದನ್ನು
ಸಾಬೀತುಪಡಿಸುವಂತಹ ಸಂದರ್ಭಗಳಲ್ಲಿ ಮಾತ್ರ ಅದರ ಮೇಲೆ
ನಿರ್ಬಂಧಗಳನ್ನು ಹೇರಬಹುದು.

-**Mankind,** ಡಿಸೆಂಬರ್ ೧೯೫೭

ವ್ಯಕ್ತಿಯ ಅಭ್ಯುದಯ, ಖುಷಿ, ಶಿಕ್ಷಣ ಮತ್ತು
ಆರೋಗ್ಯಗಳಲ್ಲದೆ, ಬಿಡುವೂ ಸೇರಿದಂತೆ ಆತನ ಬದುಕು ಮತ್ತು
ಆಲೋಚನೆಗಳ ಬಹುಭಾಗವನ್ನು ವಿವಿಧ ರೀತಿಯ ಯೋಜನೆ
ಗಳ ವ್ಯಾಪ್ತಿಗೆ ತರಲಾಗುತ್ತಿದೆ. ಇಂತಹ ಯೋಜನಾ ಪ್ರಕ್ರಿಯೆ,
ಕಮ್ಯೂನಿಸ್ಟ್ ಪ್ರಭುತ್ವಗಳಲ್ಲಿ ಕಠಿಣವಾಗಿ ಜಾರಿಯಾಗುತ್ತಿದೆ
ಎಂಬುದು ನಿಜವಾಗಿದ್ದರೂ, ಜಗತ್ತಿನ ಎಲ್ಲೆಡೆಯೂ ಈ ಸಾಂಸ್ಥಿಕ

ಒತ್ತಾಯಗಳ ಪ್ರವೃತ್ತಿ ಬೆಳೆಯುತ್ತಿರುವುದನ್ನು ನಾವು ನಿರ್ಲಕ್ಷಿಸುವಂತಿಲ್ಲ.

–Marx, Gandhi and Socialism, ಪು.೪೩೦–೩೧

ವ್ಯಕ್ತಿವಾದದ ವೈಭವದೊಂದಿಗೆ ಆರಂಭವಾದ ಈ ಪ್ರಸಕ್ತ ನಾಗರಿಕತೆ ತನ್ನ ಪೂರ್ಣ ಸುತ್ತನ್ನು ಪೂರ್ಣಗೊಳಿಸಿ, ಈ ಅವಧಿಯಲ್ಲಿ ಮನುಷ್ಯನನ್ನು ಸಮೂಹದ ಯಂತ್ರ ವ್ಯವಸ್ಥೆಯ ಒಂದು ಬಿಡಿ ಭಾಗವಷ್ಟೇ ಎಂಬಂತೆ ಮಾಡಿಬಿಟ್ಟಿದೆ. ಇದಕ್ಕೆ ಕಾರಣ ಬಹುಶಃ ಈ ಆಧುನಿಕ ನಾಗರಿಕತೆ ಎಂಬುದು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಸಾಧನೆಯ ಭರದಲ್ಲಿ ಆಧ್ಯಾತ್ಮಿಕ ಸಮಾನತೆಯ ಸಾಧನೆ ಕಡೆ ಗಮನ ಹರಿಸುವುದನ್ನೇ ಮರೆತಿದ್ದಿರಬಹುದು... ಈ ಹಿಂದಿನ ನಾಗರಿಕತೆಗಳು ಸಾಮಾಜಿಕ ಅಸಮಾನತೆ ಮತ್ತು ಆಧ್ಯಾತ್ಮಿಕ ಸಮಾನತೆಗಳ ನಡುವಣ ಅಂತರದ ಭಾರದಿಂದ ಕುಸಿದಿದ್ದರೆ, ಆಧುನಿಕ ನಾಗರಿಕತೆ ಸಾಮಾಜಿಕ ಸಮಾನತೆ ಹಾಗೂ ಆಧ್ಯಾತ್ಮಿಕ ಅಸಮಾನತೆಗಳ ನಡುವಣ ಅಂತರದ ಭಾರದಿಂದ ಕುಸಿಯುತ್ತಿದೆ. ಏಕೆಂದರೆ, ಆಧುನಿಕ ಮನುಷ್ಯ, ಕ್ರಾಂತಿಕಾರಿ ತಂತ್ರಜ್ಞಾನದ ಅಗಾಧ ಬೆಳವಣಿಗೆಯ ಮೂಲಕ ಎಂತಹ ಮನಃಸ್ಥಿತಿಯನ್ನು ಮುಟ್ಟಿದ್ದಾನೆಂದರೆ, ಆತ ತನ್ನ ಸಹಜೀವಿಗಳೊಂದಿಗೆ ನೇರ ಹಾಗೂ ಆಪ್ತ ಬಂಧುತ್ವವನ್ನೇ ಸಂವೇದಿಸಲಾಗದವನಾಗಿದ್ದಾನೆ.

-Wheel of History, ಪು.೭೨

ಸಮಾನತೆಯನ್ನು ಅದರೆಲ್ಲ ನಾಲ್ಕು ಅರ್ಥಗಳಲ್ಲಿ ಗ್ರಹಿಸಬೇಕು. ಭೌತಿಕ ಸಮಾನತೆ ಎಂದರೆ ರಾಷ್ಟ್ರದೊಳಗಿನ ಆಂತರಿಕ ಸಮೀಪೀಕರಣವಷ್ಟೇ ಅಲ್ಲ, ರಾಷ್ಟ್ರಗಳ ನಡುವಣ

ಬಾಹ್ಯ ಸಮೀಪೀಕರಣ ಎಂದೂ ಅರ್ಥವಾಗಬೇಕು. ಹಾಗೇ ಆಧ್ಯಾತ್ಮಿಕ ಸಮಾನತೆ ಎಂದರೆ, ಆಂತರಿಕ ಪ್ರಶಾಂತಿ ಎಂದಷ್ಟೇ ಅಲ್ಲ, ಬಾಹ್ಯ ಬಂಧುತ್ವದ ಭಾವನೆ ಎಂದು ಕೂಡಾ ಅರ್ಥವಾಗಬೇಕು. ರಾಷ್ಟ್ರದೊಳಗಿನ ಮತ್ತು ರಾಷ್ಟ್ರಗಳ ನಡುವಣ ಪ್ರಶಾಂತಿ, ಬಂಧುತ್ವ ಮತ್ತು ಭೌತಿಕ ಸಮಾನತೆಯ ಈ ನಾಲ್ಕು ಆಯಾಮಗಳ ಒಂದು ಸಮಗ್ರ ಪರಿಕಲ್ಪನೆ ಮಾತ್ರ ಬದುಕಿನ ಪರಮ ಗುರಿ ಮತ್ತು ಉದ್ದೇಶಗಳಾಗಲು ಅರ್ಹ.

–Marx, Gandhi and Socialism, ಪು.೨೪೧

ಯಾವುದೇ ಒಂದು ದೇಶ ಶ್ರೀಮಂತಗೊಂಡಷ್ಟೂ, ಅದರೊಳಗಿನ ಜನತೆಯ ನಡುವೆ ಅಸಮಾನತೆ ಹೆಚ್ಚುತ್ತಾ ಹೋಗುವಂತಹ ಮತ್ತು ಅದೇ ಸಮಯದಲ್ಲಿ ಈ ಹೆಚ್ಚಳದ ಪ್ರಮಾಣಕ್ಕನುಸಾರವಾಗಿ, ಬಡದೇಶಗಳಲ್ಲಿನ ಜನತೆಯ ನಡುವೆಯೂ ಅಸಮಾನತೆ ಹೆಚ್ಚಾಗುವಂತಹ ಸಾಮಾಜಿಕ ನಿಯಮವೊಂದು ಜಗತ್ತಿನಲ್ಲಿ ಕೆಲಸ ಮಾಡುತ್ತಿರುವಂತಿದೆ.

–Marx, Gandhi and Socialism, ಪು.೪೦೬–೪೦೭

ಅಮೂರ್ತ ಅಸಮಾನತೆ ನಿರಂತರವಾಗಿ ಮೂರ್ತ ಸಮಾನತೆಯೊಂದಿಗೆ ಸಂಬಂಧವಿರುವಂತೆ ನೋಡಿಕೊಳ್ಳಬೇಕು. ಸಾರ್ವತ್ರೀಕರಣದ ಇತರ ಪ್ರಯತ್ನಗಳ ಬಗೆಗೂ ಇಂತಹುದೇ ಎಚ್ಚರ ವಹಿಸಬೇಕು. ಇಲ್ಲದೇ ಹೋದರೆ, ನಾಲಗೆ ನಿರಂತರವಾಗಿ ಚರಕವನ್ನು ತಿರುಗಿಸುತ್ತಿರುತ್ತದೆ ಮತ್ತು ಕೈಗಳು ನಿರಂತರವಾಗಿ ಜವಳಿ ಗಿರಣಿ ಯಂತ್ರಗಳನ್ನು ಸ್ಥಾಪಿಸುತ್ತಿರುತ್ತವೆ. ನಾಲಿಗೆ ಅಹಿಂಸೆ ಮತ್ತು ಸಮಾನತೆಯ ಹಾಡುಗಳನ್ನು ಹಾಡುತ್ತಿರುತ್ತದೆ;ಆದರೆ, ಕೈ ಅಸಮಾನತೆಯನ್ನು ಆಚರಿಸುತ್ತ ಬಂದೂಕನ್ನು ಬಳಸುತ್ತಿರುತ್ತದೆ.

–Marx, Gandhi and Socialism, ಪು.೨೧೮

ಭಾರತೀಯ ಮನಸ್ಸು ಅಮೂರ್ತವನ್ನೂ ಮೂರ್ತದಿಂದ ಬೇರ್ಪಡಿಸಿಟ್ಟಿರುವ ಒಂದು ಅಸಾಮಾನ್ಯ ಸಾಮರ್ಥ್ಯವನ್ನು ಗಳಿಸಿಕೊಂಡುಬಿಟ್ಟಿದೆ. ಇದೇ ನಮ್ಮ ಎಲ್ಲ ಕೆಡುಕುಗಳ ಮೂಲ ವಾಗಿದೆ... ಭಾರತೀಯ ಮನಸ್ಸು ಈ ಎರಡು ವಿದ್ಯಮಾನಗಳಿಗೆ ಸಂಬಂಧಪಟ್ಟಂತೆ ಎರಡು ಕಪಾಟುಗಳಾಗಿ ವಿಭಾಗಿಸಲ್ಪಟ್ಟಿದ್ದು, ಅದು ಒಂದು ತೆರೆದುಕೊಂಡರೆ ಇನ್ನೊಂದು ತಂತಾನೇ ಮುಚ್ಚಿಕೊಳ್ಳುವಂತೆ ಆಯೋಜಿಸಲ್ಪಟ್ಟಿದೆ.

-**Will to Power,** ಪು.೧೯೬

ಭಾರತ ಹೆಚ್ಚೆಂದರೆ ಮನಸ್ಸಿನ ನೆಲೆಯಲ್ಲಿ ಸಮಾನತೆ ಯನ್ನು ಸಾಧಿಸಲು ಯತ್ನಿಸುತ್ತಾ, ಸಾಮಾಜಿಕ ಹಾಗೂ ಆರ್ಥಿಕ ನೆಲೆಗಳ ಸಮಾನತೆಯನ್ನು ನಿರ್ಲಕ್ಷಿಸಿತು. ಯುರೋಪ್ ಹೆಚ್ಚೆಂದರೆ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳ ಸಮಾನತೆ ಯನ್ನು ಸಾಧಿಸುವ ಪ್ರಯತ್ನ ಮಾಡುತ್ತಾ, ಮನಸ್ಸಿನ ಸಮಾನತೆ ಯನ್ನು ನಿರ್ಲಕ್ಷಿಸಿದೆ. ಮಾನವ ಜನಾಂಗ ಪ್ರಶಾಂತಿಯ ಸಾಂಸ್ಕೃತಿಕ ಭಿತ್ತಿಯ ಹಿನ್ನೆಲೆಯಲ್ಲಿ, ಮನಸ್ಸು ಮತ್ತು ದೇಹಗಳ ಜೋಡಿತ್ವದಲ್ಲಿ ತನ್ನ ಅಸ್ಮಿತೆಯನ್ನು ರೂಪಿಸಿಕೊಳ್ಳುವ ಪ್ರಯತ್ನದ ಫಲಿತಾಂಶಗಳನ್ನು ಕಾತರದಿಂದ ನಿರೀಕ್ಷಿಸುತ್ತಿದೆ.

–**Marx, Gandhi and Socialism,** ಪು.೪೯೩

ಸಮಾನತೆಯ ಹಂಬಲ ಕರುಣೆ–ಸಹಾನುಭೂತಿಗಳ ಆಚರಣೆಗಷ್ಟೇ ಸೀಮಿತಗೊಳ್ಳದೆ, ಮತ್ಸರವಲ್ಲದ ಸಿಟ್ಟಿನ ಆಚರಣೆಯಾಗಿಯೂ ಕಾಣಿಸಿಕೊಳ್ಳಬೇಕಿದೆ.

–ಲೋಕಸಭಾ ಭಾಷಣ, ಫೆಬ್ರುವರಿ೨೫, ೧೯೬೪

ಆಧುನಿಕ ಜಗತ್ತಿನಲ್ಲಿ ಸಮಾನತೆಯ ಆಕಾಂಕ್ಷೆ ಎಂಬುದು ಸಮತೆಯ ಅಲ್ಲ, ಸಮರೂಪದ(ಒಂದೇ ರೀತಿ ಇರುವುದರ) ಆಕಾಂಕ್ಷೆಯಾಗಿಬಿಟ್ಟಿದೆ. ಸಾಮುದಾಯಿಕ ಹಾಗೂ ವೈಯಕ್ತಿಕ ನೆಲೆಗಳಲ್ಲಿ ಸಮಾನತೆಯನ್ನು ಸಾಧಿಸುವ ಪ್ರಯತ್ನ, ಅದು ಹೀಗೆ ಏಕರೂಪಿಯಾಗುವ ಆಕಾಂಕ್ಷೆಗೆ ಬಲಿ ಬಿದ್ದಲ್ಲಿ ಭ್ರಷ್ಟಗೊಳ್ಳುವುದು ಅನಿವಾರ್ಯ.

–Marx, Gandhi and Socialism, ಪು.೨೩೪

ಮಹಾತ್ಮ ಗಾಂಧಿ ವ್ಯಕ್ತಿಗೆ ಹೆಚ್ಚು ಒತ್ತು ಕೊಟ್ಟು, ಪರಿಸರಕ್ಕೆ ಅಷ್ಟು ಒತ್ತು ಕೊಡಲಿಲ್ಲ ಎಂಬುದು ನಿಜವೇ ಇರಬಹುದು. ಆದರೆ ಸಮಾಜವಾದ ಪರಿಸರಕ್ಕೆ ಹೆಚ್ಚು ಹೊತ್ತು ಕೊಟ್ಟು, ವ್ಯಕ್ತಿಗೆ ಅಷ್ಟು ಹೆಚ್ಚು ಒತ್ತು ಕೊಟ್ಟಿಲ್ಲ ಎಂಬುದನ್ನೂ ನೆನಪಿಟ್ಟುಕೊಂಡರೆ ಒಳ್ಳೆಯದು.

–Marx, Gandhi and Socialism, ಪು.೧೩೭

ಮನುಷ್ಯ ಗುರಿಯಾಗಿ ಎಲ್ಲರಿಗೂ ಪ್ರೀತಿಸುವ ಸಂಕೇತ; ಮಾರ್ಗವಾಗಿ ಆತ ಕ್ರಾಂತಿಕಾರಿ ಸಿಟ್ಟಿನ ಮತ್ತು ದುಷ್ಟತನದ ವಿರುದ್ಧದ ಉಪಕರಣ ಕೂಡಾ ಹೌದು.

–Marx, Gandhi and Socialism, ಪು.೩೭೫

ಒಂದು ಅನ್ಯಾಯವನ್ನು ನೋಡಿದಾಗ ಕಣ್ಣು ಸಂಕಟದಿಂದ ಒದ್ದೆಯಾಗುವುದಷ್ಟೇ ಅಲ್ಲ, ಅದು ಸಿಟ್ಟಿನಿಂದ ಕೆಂಪಗಾಗಬೇಕು ಕೂಡಾ... ನನ್ನ ಮನಸ್ಸಿನಲ್ಲಿರುವುದು, ಇಂತಹ ಕ್ರಾಂತಿ–ಘಟನೆಗಳು ಸಂಭವಿಸುತ್ತಿರುತ್ತವೆ. ಇರುವ ದುಷ್ಟ ಆಳ್ವಿಕೆಯನ್ನು ಕೊನೆಗಾಣಿಸಲು ಪ್ರಯತ್ನಗಳು ನಡೆದಿರುತ್ತವೆ, ಕಾನೂನುಗಳನ್ನು

ಉಲ್ಲಂಘಿಸಲಾಗುತ್ತಿರುತ್ತದೆ; ಜನ ಸ್ವಯಂ ಸಂಕಷ್ಟ ಅನುಭವಿಸುತ್ತಿರುತ್ತಾರೆ ಮತ್ತು ಎಲ್ಲ ರೀತಿಯ ದಾಳಿ ಹಾಗೂ ದೌರ್ಜನ್ಯಗಳಿಗೆ ಈಡಾಗಿ ಸಾವಿರಾರು ಸಂಖ್ಯೆಯಲ್ಲೇ ಜನ ಸಾಯುತ್ತಿರುತ್ತಾರೆ. ಆದರೆ ಕ್ರಾಂತಿಕಾರಿಗಳು ತಮ್ಮ ಉದ್ದೇಶವನ್ನು ಸಾಧಿಸಿಕೊಳ್ಳಲು ಭಯ ಮತ್ತು ದ್ವೇಷಗಳ ಮಧ್ಯವರ್ತಿಗಳನ್ನು ಬಳಸಿಕೊಳ್ಳುವುದಿಲ್ಲ. ಏಕೆಂದರೆ ಭಯ ಮತ್ತು ದ್ವೇಷ ಬಂಡವಾಳಶಾಹಿ ಮತ್ತು ಕಮ್ಯೂನಿಸಂ ಎಂಬೆರಡು ವ್ಯವಸ್ಥೆಗಳು ಸೃಷ್ಟಿಸಿರುವ ಕೆಡುಕಿನ ಗಾತ್ರವನ್ನು ಇನ್ನಷ್ಟು ಹೆಚ್ಚಿಸುವುದರ ಹೊರತಾಗಿ ಇನ್ನೇನೂ ಸಾಧಿಸಲಾರವು.

–**Marx, Gandhi and Socialism,** ಪು.೧೯೧

ತಾನು ಇಡುವ ತಕ್ಷಣದ ಹೆಜ್ಜೆ ಅಥವಾ ಕೈಗೊಳ್ಳುವ ಕ್ರಿಯೆಯ ಕಡೆ ಯಾರೂ ಸಾಕಷ್ಟು ಗಮನ ಕೊಡುತ್ತಿಲ್ಲ. ಇದರಿಂದಾಗಿ ಸಾಮೂಹಿಕ ಬದುಕಿನಲ್ಲಿ ಒಂದು ರೀತಿಯ ನಿಗೂಢತೆ ಸೃಷ್ಟಿಯಾಗಿಬಿಟ್ಟಿದೆ... ಈ ಹೆಜ್ಜೆ ಅಥವಾ ಕ್ರಿಯೆಗಳ ಸರಣಿ, ಯಾವೊಂದೂ ಹೆಜ್ಜೆ ಅಥವಾ ಕ್ರಿಯೆಯ ಸ್ವಸಮರ್ಥನೆ ಇಲ್ಲದೆ ಬೆಳೆಯುತ್ತಾ ಹೋಗುತ್ತದೆ. ಒಂದರ ಸಮರ್ಥನೆಯನ್ನು ಎಂದೂ ಮೂಡದ ಮುಂದಿನ ಹೆಜ್ಜೆಯ ಸಮರ್ಥನೆಯಲ್ಲಿ ಕಾಣಲು ಹೇಳುತ್ತಾ; ಸ್ವಸಮರ್ಥನೆ ಇಲ್ಲದ ಈ ಕ್ರಿಯೆಗಳ ಸರಣಿಯನ್ನೂ ಮುಂದುವರಿಸಲಾಗುತ್ತದೆ. ಇದರ ಪರಿಣಾಮವೆಂದರೆ ಸತ್ಯ ಮತ್ತು ಜಾಗತಿಕ ಶಾಂತಿಯ ಹೆಸರಲ್ಲಿ ಸುಳ್ಳು, ಕಪಟ, ಕ್ರೌರ್ಯ ಇತ್ಯಾದಿ ದುಷ್ಟತನಗಳು ತಾಂಡವವಾಡುತ್ತಿವೆ.

–**Marx, Gandhi and Socialism,** ಪು.೧೨೩–೧೨೪

ಜಗತ್ತಿನಲ್ಲಿ ಮೊದಲ ಬಾರಿಗೆ ಸಾಕ್ರೆಟಿಸ್‌ನಿಂದ ಹಿಡಿದು ಥೋರೋವರೆಗೆ ಅಥವಾ ನಮ್ಮವನೇ ಆದ ಪ್ರಹ್ಲಾದನವರೆಗೆ

ಬಳಕೆಯಲ್ಲಿದ್ದ ನಾಗರಿಕ ಅಸಹಕಾರದ ಅಸ್ತ್ರವನ್ನು ಮಹಾತ್ಮ ಗಾಂಧಿ ಒಂದು ಜನಸಮೂಹದ ಕೈಗೆ ಒಪ್ಪಿಸಿದ್ದಾರೆ.

-**Mankind,** ನವೆಂಬರ್ ೧೯೫೬

ನಾಗರಿಕ ಅಸಹಕಾರ ಅಥವಾ ಸವಿನಯ ಕಾನೂನು ಭಂಗವು ವಿವೇಚನೆಯ ಭರವಸೆ ಇದ್ದಂತೆ. ವಿವೇಕ ಎನ್ನುವುದು ತನ್ನ ಗುಣವನ್ನು ಉಳಿಸಿಕೊಂಡೂ ಕ್ರಿಯಾಶೀಲತೆಯನ್ನು ಪ್ರಕಟಿಸುವ ಏಕೈಕ ಮಾರ್ಗ ಎಂದರೆ ಅವಿವೇಕದ ಆಜ್ಞೆಗಳನ್ನು ಪಾಲಿಸಲು ನಾಗರಿಕ ರೀತಿಯಲ್ಲಿ ನಿರಾಕರಿಸುವುದೇ ಆಗಿದೆ.

–**Marx, Gandhi and Socialism,** ಪು.xvii

ಅನ್ಯಾಯದ ವಿರುದ್ಧ ಮತ್ತು ಹೊಸ ವ್ಯವಸ್ಥೆಯ ನಿರ್ಮಾಣಕ್ಕಾಗಿ ಇಡೀ ದೇಶವೇ ನಾಗರಿಕ ಅಸಹಕಾರಕ್ಕೆ ಸನ್ನದ್ಧವಾಗುವ ದಿನವೂ ಬಂದೀತು. ನಾಗರಿಕ ಪ್ರತಿರೋಧದ ಆಚರಣೆಯಿಂದ ಸಮಾಜಕ್ಕೇನೂ ತೊಂದರೆಯಾಗದು. ಬದಲಿಗೆ, ನ್ಯಾಯಯುತ ಕಾರಣಕ್ಕಾಗಿ ನಾಗರಿಕ ಅಸಹಕಾರವನ್ನು ಆಚರಿಸುವುದರಿಂದ ಅದಕ್ಕೆ ಅಗಣಿತ ಲಾಭವೇ ಆದೀತು. ನಾಗರಿಕ ಸತ್ಯಾಗ್ರಹಿಗಳು ನ್ಯಾಯಯುತ ಕಾರಣಗಳಿಗಾಗಿ ತಮಗೆ ಸರಿ ಅನ್ನಿಸಿದ್ದರ ಪರ ನಿಲ್ಲುವುದರಿಂದ ಮತ್ತು ಬಂಧನಗಳಿಗೆ ಮುಂದಾಗುವುದರಿಂದ ಜನತೆಯಲ್ಲಿನ ಸತ್ವಶೀಲತೆಯನ್ನೂ ಮತ್ತು ಬದಲಾವಣೆಯ ಅಗತ್ಯದ ಅರಿವನ್ನೂ ಜಾಗೃತಗೊಳಿಸಬಲ್ಲರು.

–**Marx, Gandhi and Socialism,** ಪು.೪೩೮

ಸಂಸತ್ತು ಮತ್ತು ಸಂವೈಧಾನಿಕ ಮಾರ್ಗಗಳಷ್ಟೇ ಜನತೆಯ ವಿಮೋಚನೆಯ ವಿಧಾನಗಳಾದರೆ, ಜಗತ್ತಿನ ಮೂರನೇ ಎರಡು ಭಾಗ–ನಿರ್ದಿಷ್ಟವಾಗಿ ಏಷ್ಯಾ–ಸಶಸ್ತ್ರ ಬಂಡಾಯ ಅಥವಾ

ಚಾಕು-ಚೂರಿ-ಬಂದೂಕು-ಬಾಂಬ್‌ಗಳ ಹಿಂಸಾಚಾರದ ತತ್ವಪ್ರಣಾಳಿಕೆ ಅಥವಾ ಪಂಥಗಳೆಡೆಗೆ ಧಾವಿಸುವುದರಲ್ಲಿ ನನಗಂತೂ ಅನುಮಾನವಿಲ್ಲ.

–**Marx, Gandhi and Socialism** ಪು.೧೨೭

ನಾಗರಿಕ ಅಸಹಕಾರ ಸತ್ಯಾಗ್ರಹಿಗೆ ಚರಿತ್ರೆಯ ಪಾಠ ಗೊತ್ತಿದೆ; ಕ್ರೂರಿಗಳು ಬದುಕುವುದು ಹೇಡಿಗಳಿರುವೆಡೆಗಳಲ್ಲಿ ಮಾತ್ರ ಎಂಬುದು ಗೊತ್ತಿದೆ; ಜಗತ್ತಿನ ಜನತೆ, ೯೯ ವರ್ಷಗಳ ಸಾಧು ಗೋವುಗಳ ಬದುಕು ಹಾಗೂ ನಂತರದ ಒಂದು ವರ್ಷದ ಹುಲಿಯ ಬದುಕಿನ ನಡುವೆ ತುಯ್ದಾಡುತ್ತದೆ ಎಂಬುದು ಗೊತ್ತಿದೆ. ದೀರ್ಘ ಹಾಗೂ ನಿಸ್ಸಹಾಯಕ ಶರಣಾಗತಿಯ ನಂತರ ಅದು ಹಠಾತ್ತನೆ ಸಿಡಿದೆದ್ದು ನಿಲ್ಲುತ್ತದೆ. ಕ್ರೂರ ವ್ಯವಸ್ಥೆಯೊಂದನ್ನು ಹೊಡೆದುರುಳಿಸಿ ಮತ್ತೊಂದು ಕ್ರೂರ ವ್ಯವಸ್ಥೆಯನ್ನು ಕಟ್ಟಲು... ಎಂಬುದು ಗೊತ್ತಿದೆ.

Mankind, ನವೆಂಬರ್ ೧೯೫೯

ಕ್ರಾಂತಿಯ ಕೊನೆಯ ಘಟ್ಟದಲ್ಲಿ ಹಿಂಸೆ ಅಗತ್ಯವೋ ಅನಗತ್ಯವೋ ಎಂದು ಚರ್ಚಿಸುವುದು ಎಷ್ಟು ಅಪ್ರಸ್ತುತ ಹಾಗೂ ಅಪ್ರಾಸಂಗಿಕ ಎಂದರೆ, ಇನ್ನು ಸಾಕಷ್ಟು ಕಾಲ ಬದುಕಲಿರುವ ಮನುಷ್ಯನ ಶವಯಾತ್ರೆಯನ್ನು ಹೇಗೆ ಮಾಡಬೇಕೆಂದು ಚರ್ಚಿಸುವಷ್ಟೇ ಹಾಸ್ಯಾಸ್ಪದವಾದದ್ದು. ಈವರೆಗೆ ಜಗತ್ತಿಗೆ ಸಂಸದೀಯ ಹಾಗೂ ಸಶಸ್ತ್ರ ಬಂಡಾಯ ಮಾರ್ಗಗಳಲ್ಲಿ ಒಂದನ್ನು ಮಾತ್ರ ಆರಿಸಿಕೊಳ್ಳುವ ಅವಕಾಶವಿದ್ದುದೇ ಇಂತಹ ಮೂರ್ಖ ವಾದ-ವಿವಾದಗಳಿಗೆ ಕಾರಣ. ಆದರೀಗ ವೈಯುಕ್ತಿಕ ಹಾಗೂ ಸಾಮೂಹಿಕ ನಾಗರಿಕ ಅಸಹಕಾರ ರೂಪದ ಹೊಸ ಆಯಾಮವೊಂದು ಇದಕ್ಕೆ ಸೇರಿಸಲ್ಪಟ್ಟಿದೆ.

–**Marx, Gandhi and Socialism,** ಪು.೪೩೧

ಶಸ್ತ್ರಾಸ್ತ್ರ ಎಂದರೆ ಅನ್ಯಾಯ ಎಂದೇ ಅರ್ಥ. ಏಕೆಂದರೆ ಶಸ್ತ್ರಾಸ್ತ್ರಗಳು ಬೇಕಾಗುವುದು ಅನ್ಯಾಯವನ್ನು ಪರಿಹರಿಸಲು ಅಥವಾ ಅದರ ತೀವ್ರತೆಯನ್ನು ಕಡಿಮೆ ಮಾಡಲು. ಹಾಗಾಗಿ ಅನ್ಯಾಯವನ್ನು ಸಂಪೂರ್ಣ ತೊಡೆದು ಹಾಕಿದ ಮೇಲೆ ಶಸ್ತ್ರಾಸ್ತ್ರಗಳ ಅಗತ್ಯವಿರುವುದಿಲ್ಲ.

–ನಿರಾಶಾ ಕೆ ಕರ್ತವ್ಯ್ (ನೈನಿತಾಲ್‌ನಲ್ಲಿ ಸಮಾಜವಾದಿ ಅಧ್ಯಯನ ಶಿಬಿರದಲ್ಲಿ ಮಾಡಿದ ಭಾಷಣ, ೧೯೬೨)

ನಾವು ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡಾಗ ಹೃದಯದ ದೌರ್ಬಲ್ಯಕ್ಕೆ ಒಳಗಾಗುತ್ತೇವೆ. ಶಸ್ತ್ರಾಸ್ತ್ರಗಳನ್ನು ಅವಲಂಬಿಸು ವವರು ಹೃದಯದ ಮಾತನ್ನು ಕೇಳಲು ನಿಲ್ಲಿಸಿಬಿಟ್ಟಿರುತ್ತಾರೆ. ಅವರು ತಮ್ಮ ಆಯುಧಗಳ ಗುಲಾಮರಾಗಿಬಿಟ್ಟಿರುತ್ತಾರೆ. ಹಾಗಾಗಿ ಅವರಲ್ಲಿ ಯಾವ ಶಕ್ತಿಯೂ ಉಳಿದಿರುವುದಿಲ್ಲ. ವಯಸ್ಕ ಮತದಾನಾಧಾರಿತವಾದ ಪ್ರಜಾಪ್ರಭುತ್ವ ಜಗತ್ತಿನಾದ್ಯಂತ ಹರಡಬೇಕು. ಅದರಲ್ಲಿ ಸಹಜವಾಗಿಯೇ ಸಾಮ್ರಾಜ್ಯಶಾಹಿಗೇ ಆಗಲಿ, ಬಂಡವಾಳಶಾಹಿಗೇ ಆಗಲಿ ಅವಕಾಶವಿರುವುದಿಲ್ಲ.... ಬ್ರಿಟನ್‌ನ ನಾಶವನ್ನು ನಾನು ಬಯಸುವುದಿಲ್ಲ. ಬ್ರಿಟಿಷರು ನಮಗೆ ಕೆಡುಕನ್ನು ಮಾಡಿರಬಹುದು; ನಾನು ಅವರಿಗೆ ಕೆಡುಕನ್ನು ಬಯಸುವುದಿಲ್ಲ. ಆದರೆ ಬ್ರಿಟಿಷ್ ಜನತೆ ಜಗತ್ತಿನ ಜನ ಸಮುದಾಯಗಳನ್ನು ಗುಲಾಮಗಿರಿಗೆ ಈಡು ಮಾಡಿರುವಂತಹ ವ್ಯವಸ್ಥೆಯೊಂದನ್ನು ಹೊತ್ತು ನಡೆಯುತ್ತಿರುವುದು ನನ್ನಲ್ಲಿ ತೀವ್ರ ಅಸಂತೋಷವನ್ನು ಉಂಟು ಮಾಡಿದೆ.

–Harijan, ಆಗಸ್ಟ್ ೨೫, ೧೯೪೦

ಅಧಿಕಾರ ಹಿಡಿಯುವುದು ನಮ್ಮ ಕಾರ್ಯಕ್ರಮ ವಾಗಿದ್ದಾಗ ಅದರ ಕೊನೇ ಘಟ್ಟದಲ್ಲಿ ಸಮೂಹ ಹಿಂಸೆ

ಸಂಭವಿಸಿದರೆ, ಅದನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ. ಇದರ ಹೊರತಾಗಿ ಕೊಲ್ಲುವುದಾಗಲೀ, ಹೊಡೆಯುವುದಾಗಲೀ ಅಥವಾ ದೇಹ ಮತ್ತು ಮನಸ್ಸುಗಳಿಗೆ ಆಘಾತ ಮಾಡುವುದಾಗಲೀ ನನಗೆ ಜಿಗುಪ್ಸೆ ಹುಟ್ಟಿಸುತ್ತದೆ.

–ಪತ್ರಿಕಾಗೋಷ್ಠಿಯೊಂದರಲ್ಲಿ, ೧೯೬೭, (**Mankind**
ಮಾರ್ಚ್–ಏಪ್ರಿಲ್, ೧೯೬೮)

ಸಾರ್ವಜನಿಕ ಕಾರಣಕ್ಕಾಗಿ ಉಪವಾಸ ಸತ್ಯಾಗ್ರಹ ಮಾಡುವುದು, ಸೆರೆಮನೆಯ ಹೊರಗೆ ಅದನ್ನು ಸಾರ್ವಜನಿಕವಾಗಿ ಕೈಗೊಳ್ಳುವುದು ಆತ್ಮವಂಚನೆ, ಅಸತ್ಯ ಮತ್ತು ವೈಯುಕ್ತಿಕತೆಯನ್ನು ಪೋಷಿಸುತ್ತದಷ್ಟೆ. ಗಾಂಧೀಜಿ ಬದುಕಿದ್ದಾಗಲೇ ಉಪವಾಸ ಸತ್ಯಾಗ್ರಹ ಅಥವಾ ಮುಷ್ಕರಗಳು ಅತ್ಯಂತ ಮೋಸದಾಯಕವಾದ ಅಸ್ತ್ರ ಎಂದು ನಾನು ಅವರೊಡನೆ ವಾದಿಸಿದ್ದೆ.

-The Caste System, ಪುಟ ೨೭

ಆಂತರಿಕ ದುಷ್ಟ ಆಳ್ವಿಕೆಯನ್ನು ಸಹಿಸುವ ಜನತೆ ಕಾಲಕ್ರಮದಲ್ಲಿ ಅದಕ್ಕೆ ಹೊಂದಿಕೊಂಡು, ವಿದೇಶಿ ಶಕ್ತಿಗಳ ಗುಲಾಮಗಿರಿಯನ್ನು ಸಹಿಸಲು ತಯಾರಾಗುತ್ತದೆ. ಭಾರತದಲ್ಲಿ ಆದದ್ದು ಇದೇ ಎಂದು ನಾನು ಭಾವಿಸಿದ್ದೇನೆ. ಯಾವುದೇ ದೇಶ, ಅದರ ಜನತೆ ಪ್ರಜ್ಞೆ ಕಳೆದುಕೊಂಡು ಎಚ್ಚರದಪ್ಪಿದರೆ ವಿದೇಶಿ ಶಕ್ತಿಗಳ ಗುಲಾಮಗಿರಿಗೆ ಈಡಾಗುವುದು ಖಂಡಿತ. ದೇಶದೊಳಗೆ ಆಳುತ್ತಿರುವವರು ಎಚ್ಚರದಿಂದಿದ್ದರೆ ಸಾಕು, ಆ ಎಚ್ಚರ ದೇಶವನ್ನು ಉಳಿಸಬಲ್ಲದೆಂಬ ತಪ್ಪು ಕಲ್ಪನೆ ಇದೆ. ಇಲ್ಲ, ಎಚ್ಚರದ ಸ್ಥಿತಿಯಲ್ಲಿರುವ ಜನತೆ ಮಾತ್ರ ದೇಶವನ್ನು ಗುಲಾಮಗಿರಿಯಿಂದ ಕಾಪಾಡಬಲ್ಲುದು.

-Mankind, ನವೆಂಬರ್ ೧೯೬೦

ದೇಶವೊಂದರೆ ಇತಿಹಾಸದ ಅರಿವು ಅದರ
ವರ್ತಮಾನದ ರೂಪುರೇಷೆಗಳನ್ನು ನಿರ್ಧರಿಸುತ್ತದೆ. ಈ ಅರಿವು
ವಸ್ತುನಿಷ್ಠವಾಗಿರಬೇಕು ಮತ್ತು ಸತ್ಯಾಧಾರಿತವಾಗಿರಬೇಕು
ಹಾಗೂ ವಾಸ್ತವವಾಗಿ ಸಂಭವಿಸಿದ್ದ ಘಟನೆಗಳಿಗೆ ಅನುರೂಪ
ವಾಗಿರಬೇಕು. ದೇಶಭಕ್ತನ ಗತವೈಭವದ ಹುಸಿ ಪ್ರಲಾಪವಾಗಲೀ
ಅಥವಾ ಆಳುವ ಪ್ರಭುವಿನ ಸಾಮ್ರಾಜ್ಯಶಾಹಿ ಠಕ್ಕಾಗಲಿ ಈ
ಅರಿವನ್ನು ಮಲಿನಗೊಳಿಸುವಂತಿರಬಾರದು... ಇಂತಹ ಅರಿವಿನ
ಆಧಾರದ ಮೇಲೆ ಮಾತ್ರ ರಾಷ್ಟ್ರವೊಂದು ಉತ್ತಮತರ
ಭವಿಷ್ಯಕ್ಕಾಗಿ ವರ್ತಮಾನದಲ್ಲಿ ಹೋರಾಟ ಮಾಡಬೇಕಾಗುವುದು.

–Modern Review, ಜನವರಿ ೧೯೩

ಭಾರತದ ಆಕ್ರಮಣಕಾರರನ್ನು ತನ್ನೊಳಕ್ಕೆ ಸಂಯೋಜಿಸಿ
ಕೊಳ್ಳುವ ವಿಶಿಷ್ಟ ಶಕ್ತಿಯ ಬಗ್ಗೆ ಆಗಾಗ್ಗೆ ಮಾತನಾಡಲಾಗುತ್ತದೆ
ನಮ್ಮ ದೇಶ ಸದಾ ಈ ಸಂಶ್ಲೇಷಣೆಯ ಪ್ರಕ್ರಿಯೆಯಲ್ಲಿ
ನಿರತವಾಗಿದೆ ಎಂದು ಹೇಳಲಾಗುತ್ತದೆ. ಇದು ಬರಿ ಭೋಳೆ
ಮಾತ್ರವಲ್ಲ, ಇದು ಮನಸ್ಸನ್ನು ದುರ್ಬಲಗೊಳಿಸಿ ಸಂಕಲ್ಪ
ಶಕ್ತಿಯನ್ನು ಕುಂದಿಸುವಂತಹುದಾಗಿದೆ. ಇಂತಹ ನಂಬಿಕೆ
ವರ್ತಮಾನದ ಆಕ್ರಮಣಕಾರರನ್ನು ಎದುರಿಸಿದಂತೆ ಮನಸ್ಸನ್ನು
ಸಿದ್ಧಗೊಳಿಸಬಲ್ಲುದಾಗಿದೆ. ಈ ತರಹದ ಮನೋಭಾವಕ್ಕೆ ಅಂತ್ಯ
ಹಾಡಬೇಕಿದೆ. ಸಂಯೋಜನೆ ಅಥವಾ ಸಂಶ್ಲೇಷಣೆ ಎರಡು
ತೆರನಾಗಿರುತ್ತದೆ–ಗುಲಾಮಗಿರಿಯದು ಇಲ್ಲವೇ ಯಜಮಾನಿಕೆ
ಯದು. ಕಳೆದ ಒಂದು ಸಾವಿರ ವರ್ಷಗಳ ಭಾರತದ ಇತಿಹಾಸ
ಮೊದಲ ತೆರನ ಸಂಯೋಜನೆಯನ್ನಷ್ಟೇ ನಮಗೆ ಸೂಚಿಸುತ್ತಿದೆ.

-Mankind, ಮಾರ್ಚ್ ೧೯೬

ಸಮಾಜವಾದಿ ಆಂದೋಲನ ಕೆಲವೇ ಕೆಲವರ ಅಭೂತ ಪೂರ್ವ ಪ್ರಗತಿಗೆ ಬದಲಾಗಿ; ಸ್ವಲ್ಪ ನಿಧಾನವಾದರೂ ಸರಿಯೇ, ಇಡೀ ಜನಸಮುದಾಯದ ಪ್ರಗತಿಯನ್ನು ಸಾಧಿಸುವಂತಹ ಯೋಜನಾ ಕಾರ್ಯಕ್ರಮಗಳ ಪರವಾಗಿದೆ. ಇಂತಹ ಕಾರ್ಯಕ್ರಮ ಒಟ್ಟಿಗೇ ಸಂಪತ್ತು-ಸಮೃದ್ಧಿಗಳ ಶಿಖರಗಳನ್ನು ಸವರಿ ಹಾಕುವ ಮತ್ತು ಬಡತನದ ಆಳಪ್ರತಾಪಗಳನ್ನು ತುಂಬುವಂತಹ ಸಮ ಮಾಡುವ ಕೆಲಸದಿಂದ ಆರಂಭವಾಗಬೇಕು. ದೇಶದ ಇಡೀ ಜನಸಮುದಾಯವನ್ನು ಸಹನೀಯ ಅಸಮಾನತೆಯ ಅಥವಾ ಗರಿಷ್ಠ ಸಾಧ್ಯ ಸಮಾನತೆಯ ವ್ಯಾಪ್ತಿಗೆ ಒಳಪಡಿಸಿದಾಗ ಯೋಜನೆಗಳು ಮತ್ತು ಸಾಹಸೋದ್ಯಮಗಳ ಫಲಗಳು ಕೆಲವರಿಗೆ ಮಾತ್ರವಲ್ಲ, ಎಲ್ಲರಿಗೂ ದೊರಕುವಂತಾಗುವುದು.

-**Mankind,** ಮಾರ್ಚ್ ೧೯೬೨

ಆಧುನಿಕವಾಗದೆ ಭಾರತ ತನ್ನ ಪುರಾತನ ಕಸುವನ್ನು ಗಳಿಸಿಕೊಳ್ಳಲಾಗದು. ಆದರೆ ಈ ದೇಶವನ್ನು ಕೃತಕ ಹಾಗೂ ಮೇಲ್ಸ್ತರ ಮಟ್ಟದಲ್ಲಿ ಐರೋಪ್ಯೀಕರಣಗೊಳಿಸುವಂತಹ ಆಧುನೀಕರಣ ಬೇಡ.

-**Interval During Politics,** ಪುಟ ೮೯

ಮೂಲ ಸಮಸ್ಯೆ ಬಡತನಕ್ಕೆ ಸಂಬಂಧಿಸಿದ್ದು; ಆಸ್ತಿಯ ಆಸೆ ಮತ್ತು ಆಸ್ತಿ ಎಂಬ ಸಂಸ್ಥೆಗೆ ಸಂಬಂಧಿಸಿದ್ದು. ಆಸ್ತಿಯ ಸಂಸ್ಥಾ ರೂಪಕ್ಕೆ ಸಂಬಂಧಿಸಿದಂತೆ ಮಾರ್ಕ್ಸ್ ಪರಿಹಾರ ವೊಂದನ್ನು ಮುಂದಿಟ್ಟಿದ್ದಾನೆ. ಹಾಗೇ ಆಸ್ತಿಯ ಆಸೆಯ ಸಮಸ್ಯೆಗೆ ಉಪನಿಷತ್ತುಗಳು ಪರಿಹಾರ ಸೂಚಿಸುತ್ತವೆ. ಆದರೆ ಅದರ ಎರಡ ರೂಪಗಳನ್ನೂ ಒಟ್ಟಿಗೇ ಎದುರಿಸಿ ಪರಿಹಾರ ಸೂಚಿಸುವಂತಹ

ರಾಜಕೀಯ ತತ್ವಜ್ಞಾನ ನಮಗಿಂದು ಬೇಕಾಗಿದೆ. ನಾನು ಪ್ರತಿಪಾದಿಸುವ ಸಮಾಜವಾದ ಆಸ್ತಿಯ ಆಸೆಯನ್ನು ಹತ್ತಿಕ್ಕುವುದಲ್ಲದೆ, ಆಸ್ತಿಯ ಸಂಸ್ಥೆಗಳ ಸ್ವರೂಪವನ್ನು ಬದಲಿಸುವ ಪ್ರಯತ್ನ ಮಾಡುತ್ತದೆ.

-ಲೋಕಸಭಾ ಭಾಷಣ, ಆಗಸ್ಟ್ ೪, ೧೯೬೭

ನಮಗೆ ಅಮೆರಿಕಾ ಅಥವಾ ರಷ್ಯಾದಲ್ಲಿರುವಂತಹ ಬೃಹತ್ ಪ್ರಮಾಣದ ಯಂತ್ರಗಳು ಅಥವಾ ಪುರಾತನ ಭಾರತದ ಅವಶೇಷ ರೂಪದ ಸಾಧನ-ಸಲಕರಣೆಗಳಾಗಲಿ ಅಥವಾ ಸ್ವಯಂಚಾಲಿತ ಮಗ್ಗವಾಗಲೀ, ಚರಕವಾಗಲೀ ಬೇಕಿಲ್ಲ. ನಮಗೆ ಬೇಕಿರುವುದು ಇಂಧನದ ಮೇಲೆ ನಡೆಯುವ ಸಣ್ಣ ಘಟಕಗಳ ಯಂತ್ರ. ನಮಗೆ ಬೇಕಿರುವುದು ಮಹಾತ್ಮ ಗಾಂಧಿಯವರ ತತ್ವಗಳೇ ಹೊರತು, ಅವರ ಪ್ರೇತವಲ್ಲ.

-Will for Power, ಪುಟ ೧೯೮

ಸಣ್ಣ ಘಟಕಗಳ ಯಂತ್ರವೆಂದರೆ ವಿದ್ಯುತ್ ಅಥವಾ ಬೆಳಕಿನಿಂದ ಚಾಲಿತವಾಗಬಲ್ಲ ಕುಟೀರ ಕೈಗಾರಿಕೆಗಳಲ್ಲ. ನಾನು ಬಯಸುವುದು, ವಿದ್ಯುಚ್ಛಕ್ತಿಯಿಂದ-ಅದು ಅಣು ಮೂಲದ್ದಾಗಿರಬಹುದು, ಜಲಜನಕ ಮೂಲದ್ದೇ ಆಗಿರಬಹುದು -ಚಾಲಿತವಾಗಬಲ್ಲ, ಹೆಚ್ಚು ಬಂಡವಾಳ ಬೇಡದ ಸಣ್ಣ ಘಟಕಗಳ ಯಂತ್ರ. ಹಾಗಾಗಿ ನನ್ನ ಮನಸ್ಸಿನಲ್ಲಿರುವುದು, ಸದ್ಯ ಚಾಲನೆಯಲ್ಲಿರುವ ಯಂತ್ರಗಳಿಗಿಂತ ಹೆಚ್ಚು ಆಧುನಿಕವಾದದ್ದು.

-Mankind, ಮಾರ್ಚ್-ಏಪ್ರಿಲ್ ೧೯೬೮

ಈ ಯಂತ್ರ ಹಳ್ಳಿಗೆ, ಪಟ್ಟಣಕ್ಕೆ ಹಾಗೂ ನಗರಕ್ಕೂ ಬೇಕಾಗುವಂತಿರಬೇಕಾಗುತ್ತದೆ; ಅದು ಎಲ್ಲ ಕೆಲಸಗಳಿಗೆ ಅಥವಾ

ಆದಷ್ಟೂ ಹೆಚ್ಚು ಕೆಲಸಗಳಿಗೆ ಸಹಾಯಕವಾಗುವಂತಿರುತ್ತದೆ. ಅದನ್ನು ಕಾರ್ಯಾಚರಣೆಯ ಹಾಗೂ ಉತ್ಪನ್ನದ ದೃಷ್ಟಿಯಿಂದ ತಾಕ್ಷಣಿಕತೆಯ ತತ್ವವನ್ನಾಧರಿಸಿ (ಅಂದರೆ ಯಾವುದೇ ಸಂಕೀರ್ಣತೆಯಿಲ್ಲದ ಸರಳ-ನೇರ ವಿನ್ಯಾಸದಲ್ಲಿ) ನಿರ್ಮಿಸಲಾಗಿರುತ್ತದೆ; ಇದಕ್ಕೆ ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆಯ ಅಗತ್ಯವಿರುವುದಿಲ್ಲ.... ಈ ಯಂತ್ರ ಅಭಿವೃದ್ಧಿಶೀಲ ಜಗತ್ತಿನ ಆರ್ಥಿಕ ಸಮಸ್ಯೆಯನ್ನು ನಿವಾರಿಸುವುದಲ್ಲದೆ, ಸಮಾಜದ ಸಾಮಾನ್ಯ ಗುರಿಗಳ ಹೊಸ ಅನ್ವೇಷಣೆ ಮತ್ತು ಸಾಧನೆಯ ಹಾದಿಯಲ್ಲೂ ನೆರವಾಗುತ್ತದೆ.

–Marx, Gandhi and Socialism, ಪು.೩೨೬

ನಾನು ಹೊಸ ಯಂತ್ರದ ಬಗ್ಗೆ ಪ್ರಸ್ತಾಪ ಮಾಡಿರುವೆ. ಅಂದ ಮಾತ್ರಕ್ಕೆ, ದೊಡ್ಡ ಪ್ರಮಾಣದ ಯಂತ್ರದ ಉಪಯೋಗವನ್ನು ನಾನು ನಿರಾಕರಿಸುತ್ತಿಲ್ಲ. ನಾನು ದೊಡ್ಡ ಜವಳಿ ಗಿರಣಿಗಳ ಜಾಗದಲ್ಲಿ ಚರಕವನ್ನು ಪ್ರಸ್ತುತಪಡಿಸುತ್ತಿಲ್ಲ ಎಂಬುದು ನಿಮಗೆ ತಿಳಿದಿರಲಿ. ಆದರೆ ದೊಡ್ಡ ಪ್ರಮಾಣದ ಯಂತ್ರ ಮತ್ತು ಅದು ಕಟ್ಟುವ ವ್ಯವಸ್ಥೆ ನಮ್ಮಲ್ಲಿ ಇನ್ನಷ್ಟು ಕಾನ್‌ಪುರ ಹಾಗೂ ಕಲ್ಕತ್ತಾಗಳನ್ನೂ; ಬಿರುಸಿನ ಚಟುವಟಿಕೆಗಳ ಈ ದ್ವೀಪಗಳ ಸುತ್ತ ದಟ್ಟ ದಾರಿದ್ರ್ಯ, ಅತಿ ಕೀಳಾದ ಬದುಕು, ಬೃಹತ್ ಪ್ರಮಾಣದ ನಿರುದ್ಯೋಗ ಹಾಗೂ ಬಡತನವನ್ನು ಸೃಷ್ಟಿಸಬಹುದು.

–Marx, Gandhi and Socialism, ಪು.೩೮೬

ಜಮೀನ್ದಾರಿ ಪದ್ಧತಿಯ ರದ್ದತಿಯ ಭಾಗವಾಗಿ ಭೂಒಡೆಯರಿಗೆ ಪರಿಹಾರವಾಗಿ ದೊಡ್ಡ ದೊಡ್ಡ ಮೊತ್ತದ ಹಣ

ಪಾವತಿಯಿಂದಾಗಿ;ಮತ್ತು ರೈತರಿಗೆ ಅವರವರ ಹಣ ನೀಡುವ ಸಾಮರ್ಥ್ಯಕ್ಕನುಸಾರವಾಗಿ ವಿವಿಧ ವರ್ಗಗಳ ಹಿಡುವಳಿಗಳನ್ನು ನಿರ್ಮಿಸಿರುವುದರಿಂದಾಗಿ, ಹಳ್ಳಿಗಾಡಿನಲ್ಲಿ ಈಗಿರುವ ಅಸಮಾನತೆ ಮತ್ತಷ್ಟು ತೀವ್ರಗೊಂಡಿದೆಯಷ್ಟೇ... ಹಳ್ಳಿಯ ಪ್ರತಿ ಭೂರಹಿತನಿಗೂ, ಅದೆಷ್ಟೇ ಚಿಕ್ಕದಾಗಿರಲಿ, ಭೂಮಿಯ ತುಂಡನ್ನು ನೀಡದೆ; ಹೆಚ್ಚುವರಿ ಭೂಮಿಯನ್ನು ಪಂಚಾಯತ್‌ಗಳ ಅಧಿಕಾರ ವ್ಯಾಪ್ತಿಗೆ ಒಪ್ಪಿಸುವುದರಿಂದ ಭ್ರಷ್ಟಾಚಾರದ ಇನ್ನೊಂದು ಬಾಗಿಲು ತೆರೆದಂತಾಗುತ್ತದಷ್ಟೆ.

-Mankind, ಸೆಪ್ಟೆಂಬರ್ ೧೯೬೧

ಈ ೨೦ ಲಕ್ಷ ಪ್ರತಿಷ್ಠಿತರನ್ನು ಮುಗಿಸಿಬಿಟ್ಟರೂ ನನಗೇ ದುಃಖವಿಲ್ಲ. ಹಣ ಮತ್ತು ಆಡಂಬರಗಳಿಂದಷ್ಟೇ ಸ್ಫೂರ್ತಿಗೊಳ್ಳುವ ಜನ ಈ ದೇಶಕ್ಕೆ ಬೇಕಿಲ್ಲ. ಅವರನ್ನು ಈ ಭೂಮಿಯ ಮೇಲಿಂದ ಎಲ್ಲಿಗಾದರೂ ಒಗಾಯಿಸಿದರೆ ಒಳ್ಳೆಯದು. ಬರೀ ಈ ೨೦ ಲಕ್ಷ ಜನರನ್ನಲ್ಲ, ಈ ದೇಶದ ಉಳಿದ ೪೯ ಕೋಟಿ ೮೦ ಲಕ್ಷ ನಿವಾಸಿಗಳನ್ನು ಸ್ಫೂರ್ತಿಗೊಳಿಸುವ ಸಂಗತಿಗಳಾವುವು ಎಂಬುದನ್ನು ನಾವಿಂದು ಅನ್ವೇಷಿಸಬೇಕಿದೆ.

-ಲೋಕಸಭಾ ಭಾಷಣ, ಆಗಸ್ಟ್ ೧೯೦೭

ಈ ದೇಶದ ೪ ಕೋಟಿ ಯುವಜನರು ದಿನವೊಂದಕ್ಕೆ ಒಂದು ತಾಸಿನ ಶ್ರಮವನ್ನು ದೇಶಕ್ಕೆ ದಾನ ಮಾಡುವುದಾದರೆ, ಆ ಶ್ರಮದಿಂದ ಒಂದು ವರ್ಷದ ಆಯವ್ಯಯದಿಂದ ಭಾರತ ಸರ್ಕಾರ ಏನೆಲ್ಲಾ ಸಾಧಿಸಬಹುದೋ ಅದಕ್ಕೆ ಸಮನಾದ ಸಾಧನೆಯನ್ನು ಮಾಡಬಹುದು. ಶ್ರಮದಾನದ ಮೂಲಕ ಗ್ರಾಮೀಣ ಪುನಾರಚನೆಯ ಪ್ರಯತ್ನದ ದೃಶ್ಯ ಮಾತ್ರದಿಂದಲೇ

ನಮ್ಮ ಗಂಡು-ಹೆಣ್ಣುಗಳ ಹೃದಯದಲ್ಲಿ ಆತ್ಮವಿಶ್ವಾಸದ ಚಿಲುಮೆ ಉಕ್ಕೀತು.

–**Fragments of a World Mind** ಪು.೮೧

ಈಗಿರುವ ಆಡಳಿತಾತ್ಮಕತೆಯ ಅಡಿಯಲ್ಲಿ ವಿದೇಶೀ ನೆರವು, ಕೊಡುವವನನ್ನೂ ತೆಗೆದುಕೊಳ್ಳುವವನನ್ನೂ ಭ್ರಷ್ಟಗೊಳಿಸುತ್ತದೆ. ಕೊಡುವವನು ಅನುಗ್ರಹದ ಶೈಲಿಯಲ್ಲಿ ನಿರ್ಧಾರಕ ಶಕ್ತಿಯನ್ನು ಪಡೆದು, ತೆಗೆದುಕೊಳ್ಳುವವನನ್ನು ಬೇಡಿ ಪಡೆದವನ ಹೀನಾಯ ಸ್ಥಿತಿಗೆ ತಳ್ಳಿ ಕೊಳಕನನ್ನಾಗಿ ಮಾಡಿ ಬಿಡುತ್ತದೆ. ಇಂತಹ ವಿದೇಶಿ ನೆರವು ಅಥವಾ ಬಂಡವಾಳ ಜಾಗತಿಕ ಉತ್ಪಾದನೆಯಲ್ಲಿ ಸಮಾನತೆಯನ್ನು ಸಾಧಿಸುವ ಮತ್ತ ಅದಕ್ಕಾಗಿ ಸೂಕ್ತ ತಂತ್ರಜ್ಞಾನವನ್ನು ರೂಪಿಸಿ ಅಳವಡಿಸಿಕೊಳ್ಳುವ ಸುಯೋಜಿತ ಕಾರ್ಯಕ್ರಮದ ಭಾಗವಾಗಿರದೆ, ಬಹಳ ಬಾರಿ ಬಂಡವಾಳೀಕರಣ ಕುರಿತಂತೆ ಕೊಡುವವನಲ್ಲಿರುವ ವಿಚಾರಗಳನ್ನು ತೆಗೆದುಕೊಳ್ಳುವವನ ಮೇಲೆ ಒಂದೊಂದಾಗಿ ಹೇರುತ್ತದೆ. ಇದನ್ನು ಸಂಪೂರ್ಣ ರದ್ದು ಮಾಡುವುದು, ಅದರ ಮುಂದುವರಿಕೆ ಜಗತ್ತಿಗೆ ಮಾಡುವ ಒಳ್ಳೆಯದಕ್ಕಿಂತ ಹೆಚ್ಚಿನ ಒಳ್ಳೆಯದನ್ನು ಮಾಡುತ್ತದೆ.

–**Marx, Gandhi and Socialism** ಪು.೪೬೬

ಮೌಲ್ಯಗಳ ಶ್ರೇಣಿಯೇ, ಇಲ್ಲಿ ತಲೆಕೆಳಕಾಗಿದೆ... ಬೇಡುವುದು ದೈಹಿಕ ದುಡಿಮೆಗಿಂತ ಕಡಿಮೆ ನಾಚಿಕೆಯ ಕೆಲಸವಾಗಿಬಿಟ್ಟಿದೆ. ಕೆಲವು ಉನ್ನತ ಮಟ್ಟದ ಭಿಕ್ಷಾಟನೆಯ ರೂಪಗಳು, ಭಿಕ್ಷೆ ಕೊಡುವವನಿಗೆ ಪರಲೋಕದಲ್ಲಿ ಅಂದಾಜಿಗೂ ಸಿಗದಷ್ಟು ಲಾಭ ತರುವುದೆಂದು ನಂಬಿಸಲಾಗಿದೆ. ಕುತಂತ್ರ,

ಬಹಿರಂಗ ಶರಣಾಗತಿಯ ಹಿಂದೆಯೇ ತೆರೆಮರೆಯ ದ್ರೋಹ- ಇವು ನೇರ ನಡವಳಿಕೆ ಹಾಗೂ ದಿಟ್ಟತನಗಳಿಗೆ ಬದಲಾಗಿ, ರಾಷ್ಟ್ರದ ಯಶಸ್ವೀ ಮನುಷ್ಯನ ಸಲ್ಲಕ್ಷಣಗಳಾಗಿಬಿಟ್ಟಿವೆ. ಸುಳ್ಳನ್ನು ಸಾರ್ವಜನಿಕ ಜೀವನದ ಸಲ್ಲಕ್ಷಣವೆಂದು ಅಧಿಕಾರದ ಸಿಂಹಾಸನದ ಮೇಲೆ ಕೂರಿಸಲಾಗಿದೆ. ನ್ಯಾಯ ಮತ್ತು ರಾಷ್ಟ್ರಹಿತ ರಕ್ಷಣೆಗಳಿಗಿಂತ ಸ್ವಜಾತಿಯವರ ಹಾಗೂ ನೆಂಟರಿಷ್ಟರ ಹಿತ ಕಾಯುವುದೇ ಸಾರ್ಥಕ ಗುರಿ ಎನಿಸಿ, ವಂಚನೆಯ ಸಾರ್ವತ್ರಿಕ ವಾತಾವರಣ ನಮ್ಮನ್ನು ಮುತ್ತಿದೆ.

-The Caste System, ಪುಟ ೮೨

ಜಗತ್ತಿನ ಯಾವುದೇ ದೇಶ ಭಾರತದಂತೆ ಅಮೂರ್ತಗಳು, ನೆನಪುಗಳು ಹಾಗೂ ಭೂತಕಾಲದ ದಂತಕಥೆಗಳ ಮೇಲೆ ಬದುಕಿಲ್ಲ. ಇಲ್ಲಿನ ಜನ ವರ್ತಮಾನದ ಸಂಗತಿಗಳಿಗಿಂತ ಗತ ಕಾಲದ ಘಟನೆಗಳಿಂದಲೇ ಕಣ್ಣೀರು, ಖುಷಿ ಮತ್ತು ಗಲಭೆಗಳನ್ನು ಸೃಷ್ಟಿಸುವ ಮಟ್ಟಿಗೆ ಪ್ರಚೋದಿತರಾಗುತ್ತಾರೆ.

–Interval during Politics, ಪು.೯೫

ಬಹುಶಃ ಹಿಂದೂವೇ ಜಗತ್ತಿನ ಅತಿದೊಡ್ಡ ಆತ್ಮವಂಚಕ ಎಂದು ಕಾಣುತ್ತದೆ. ಏಕೆಂದರೆ ಆತ ಜಗತ್ತಿನ ಇತರ ಆತ್ಮವಂಚಕರಂತೆ ಇತರರನ್ನಷ್ಟೇ ವಂಚಿಸುವುದಿಲ್ಲ; ತನ್ನನ್ನು ವಂಚಿಸಿಕೊಳ್ಳುತ್ತಿದ್ದಾನೆ. ಕಾಣುವುದರ ಮತ್ತು ವಾಸ್ತವವಾಗಿ ಇರುವುದರ ನಡುವೆ ಒಡೆದು ಹೋಗಿರುವ ಅವನ ಮನಸ್ಸೇ ಇದಕ್ಕೆ ಕಾರಣವೆಂದು ತೋರುತ್ತದೆ. ಹಿಂದೂ ಧರ್ಮವೆಂಬುದು ಈ ಹಿಂದೆ ಎಂತಹ ಆಶ್ಚರ್ಯಕರ ಪ್ರಯೋಗ ಶಾಲೆಯಾಗಿತ್ತು! ಈಗ ಏನಾಗಿದೆ? ಅದು ತನ್ನ ಅನುಯಾಯಿಗಳಿಗೆ, ಅದರಲ್ಲೂ

ಸಾಮಾನ್ಯ ಅನುಯಾಯಿಗಳಿಗೆ, ಬೇರಾರಿಗೂ ಸಿಗದಿದ್ದ ಪಾರಭೌತಿಕ ಸಮಾನತೆಯ ಅಥವಾ ಮನುಷ್ಯ ಮನುಷ್ಯರ ನಡುವಣ ಹಾಗೂ ಜೀವ ಮತ್ತು ಜಡಗಳ ನಡುವಣ ಏಕತೆಯ ನಂಬಿಕೆಯನ್ನು ನೀಡಿತ್ತು. ಆದರೆ ಪಾರಭೌತಿಕ ಸಮಾನತೆಯ ಈ ನಂಬಿಕೆಯ ಜೊತೆ ಜೊತೆಯಲ್ಲೇ ಸಾಮಾಜಿಕ ಅಸಮಾನತೆಯ ಅತ್ಯಂತ ಹೀನಾಯಕರ ವರ್ತನೆಯನ್ನೂ ಅದು ಮುಂದುವರಿಸಿ ಕೊಂಡು ಬಂದಿದೆ.

–Fragments of a World Mind ಪು.೧೨೧

ಧರ್ಮ ಒಳಿತನ್ನು ಸಾಧಿಸಲು ಯತ್ನಿಸುತ್ತದೆ. ರಾಜಕಾರಣ ಕೆಡುಕನ್ನು ಎದುರಿಸುವುದಕ್ಕೆ ಸಂಬಂಧಿಸಿದೆ. ಇಂದು ನಾವು ಎಂತಹ ದುರದೃಷ್ಟಕರ ದಿನಗಳಲ್ಲಿ ಬದುಕುತ್ತಿದ್ದೇವೆ ಎಂದರೆ, ಧರ್ಮ ಕೆಡುಕಿನ ವಿರುದ್ಧದ ಹೋರಾಟಗಳಲ್ಲಿ ಭಾಗವಹಿಸುವ ಸ್ಫೂರ್ತಿಯನ್ನು ಕಳೆದುಕೊಂಡು ನಿರ್ಜೀವ ವಾಗಿದೆ. ಇನ್ನು ರಾಜಕಾರಣವಂತೂ ತೀರಾ ಜಗಳಗಂಟವಾಗಿ, ನಿಷ್ಪ್ರಯೋಜಕವೆನಿಸಿದೆ.

–Fragments of a World Mind ಪು.೧೨೫

ಕ್ರಿಶ್ಚಿಯನ್ ದೇವರ ಪ್ರಚಾರಕ್ಕೆ ಪ್ರತಿಯಾಗಿ ರಷ್ಯನರನ್ನು, ಅವರು ಇಷ್ಟಪಟ್ಟರೆ, ನಾಸ್ತಿಕತೆಯನ್ನು ಪ್ರಚಾರ ಮಾಡಲು ಬರುವಂತೆ ನಮ್ಮಲ್ಲಿಗೆ ಆಹ್ವಾನಿಸಿ, ಈ ಎರಡರ ನಡುವೆ ಶಾಂತಿಯುತ ಸ್ಪರ್ಧೆ ಏರ್ಪಡುವಂತೆ ಮಾಡಬಹುದು.

-Mankind, ಆಗಸ್ಟ್–ಸೆಪ್ಟೆಂಬರ್ ೧೯೬೩

ರಾಮ ಮತ್ತು ಕೃಷ್ಣ ಮತ್ತು ಶಿವ ಭಾರತದ ಪರಿಪೂರ್ಣತೆಯ ಕಲ್ಪನೆಯ ಮೂರು ಅಪೂರ್ವ ಕನಸುಗಳು.

ಪ್ರತಿಯೊಬ್ಬರಿಗೂ ಅವರದೇ ದಾರಿ. ರಾಮ ಸೀಮಿತ ವ್ಯಕ್ತಿತ್ವದ ಪರಿಪೂರ್ಣತೆಯ ಮಾದರಿ. ಕೃಷ್ಣನದು ತುಂಬಿ ತುಳುಕುವ ಸಮೃದ್ಧ ವ್ಯಕ್ತಿತ್ವದ ಪರಿಪೂರ್ಣತೆ. ಶಿವನದು ಆಯಾಮರಹಿತ ವ್ಯಕ್ತಿತ್ವದ ಪರಿಪೂರ್ಣತೆ. ಈ ಪ್ರತಿ ಮಾದರಿಯೂ ಪರಿಪೂರ್ಣವೇ. ಒಂದು ಇನ್ನೊಂದಕ್ಕಿಂತ ಹೆಚ್ಚು ಮತ್ತು ಕಡಿಮೆ ಪರಿಪೂರ್ಣ ಎನ್ನುವಂತೆಯೇ ಇಲ್ಲ.

ಓ ತಾಯಿ ಭಾರತಿ, ನನಗೆ ಶಿವನ ಮನಸ್ಸನ್ನೂ, ಕೃಷ್ಣನ ಹೃದಯವನ್ನೂ ಮತ್ತು ರಾಮನ ವಚನ ಹಾಗೂ ಕರ್ತೃತ್ವ ಶಕ್ತಿಯನ್ನು ನೀಡು. ನಮ್ಮನ್ನು ನಿರಾಯಾಮವಾದ ಮನಸ್ಸು, ತುಂಬಿದ ಹೃದಯ, ಆದರೆ ಮಿತಿಗಳುಳ್ಳ ಬದುಕಿನೊಂದಿಗೆ ನಿರ್ಮಿಸು.

-**Interval During Politics,** ಪುಟ ೪೮-೪೯

ಜಾತಿಯ ಬಗ್ಗೆ ಮಾತನಾಡುವುದನ್ನು ನಿಲ್ಲಿಸುವುದೆಂದರೆ ಭಾರತವೆಂಬ ಸಂಸ್ಥೆಯ ಏಕೈಕ ಅತಿಮುಖ್ಯ ವಾಸ್ತವಕ್ಕೆ ಕಣ್ಣು ಮುಚ್ಚಿಕೊಂಡಂತೆಯೇ ಸರಿ.

-**The Caste System,** ಪುಟ ೧೨೭

ಆಯುಧ, ಮದವೇರಿದ ಆನೆ, ಗೋವು, ಆಂತರಿಕ ದೇಶದ್ರೋಹಿಗಳು, ವಿದೇಶಿಯರ ಅನಾಗರಿಕ ಹಿಂಸೆ, ಅಸ್ಪೃಶ್ಯತೆ ಇತ್ಯಾದಿಗಳನ್ನು ಭಾರತದ ಗುಲಾಮಗಿರಿಗೆ ಕಾರಣವನ್ನಾಗಿ ನೀಡಲಾಗುತ್ತಿದೆ. ಇವಾವುವೂ ಅಲ್ಲ, ಜಾತಿಯೊಂದೇ ಈ ದೇಶ ಪದೇ ಪದೇ ಆಕ್ರಮಣಕ್ಕೊಳಗಾಗಿ ಶರಣಾಗತವಾಗುವುದಕ್ಕೆ ಕಾರಣವಾಗಿದೆ.

-**The Caste System,** ಪುಟ ೭೯

ಜಾತಿಯನ್ನು ಹಿಂದೂಗಳ ಮನಸ್ಸಿನಿಂದ ಪೂರ್ತಿ ತೊಡೆದು ಹಾಕುವವರೆಗೂ ಮತ್ತು ಹೆಣ್ಣು ಗಂಡುಗಳ

ಸಮಾನತೆಯನ್ನು ಸ್ಥಾಪಿಸುವವಗೆಗೂ ಹಾಗೂ ಆಸ್ತಿಯ ಸಾಂಸ್ಥಿಕ ರೂಪವನ್ನು ಬದಲಾಯಿಸುವವರೆಗೂ, ಇತಿಹಾಸದಲ್ಲಿ ಭಾರತ ಮೂಢರ ಜಡ ದೇಶವಾಗಿಯೇ ಉಳಿಯಲಿದೆ.

-**Interval During Politics,** ಪುಟ ೧೫೬

ಜಾತಿ ಪದ್ಧತಿಯಿಂದಾಗಿ ಭಾರತೀಯನ ಚಾರಿತ್ರ್ಯವೆಂಬುದೇ ಜಗತ್ತಿನಲ್ಲಿ ಅತ್ಯಂತ ಒಡಕಿನದಾಗಿದೆ. ಮೇಲಿನ ಮತ್ತು ಕೆಳಗಿನ ಜಾತಿಗಳು ತಮ್ಮನ್ನು ಪರಸ್ಪರ ಗುರುತಿಸಿಕೊಳ್ಳುವಲ್ಲಿ ಸಂಪೂರ್ಣ ವಿಫಲವಾಗಿರುವುದರಿಂದ ಒಂದು ವಿಚಿತ್ರ ಅವಾಸ್ತವದ, ಹುಸಿಯ, ಎರಡು ನಾಲಗೆಯ ಮತ್ತು ಬಿಗುವಿನ ಸನ್ನಿವೇಶ ಸೃಷ್ಟಿಯಾಗಿದ್ದು, ಅದು ಮನಸ್ಸಿನ ಸಾಮಾನ್ಯ ಸ್ಥಿತಿ ಎಂಬಂತಾಗಿ ಬಿಟ್ಟಿದೆ. ಇದರ ಪರಿಣಾಮವೆಂದರೆ ಬೆದರಿಕೆ, ಪೀಡನೆ ಅಥವಾ ಹಲ್ಲೆಯ ಮೊದಲು ಅಥವಾ ನಂತರದ ಕ್ಷಣದಲ್ಲೇ ಕಾಡುತ್ತಾ, ಬೇಡುತ್ತಾ ಗೋಳಾಡುವುದು, ವಶೀಲಿಬಾಜಿ ಮಾಡುವುದು; ಸಡಿಲವಾದ ದಿಟ್ಟತನ; ಸಂಪೂರ್ಣ ಶರಣಾಗತಿ ಸಾಧ್ಯವಾಗದ ಹೇಡಿತನ; ಮತ್ತು ಆಳುವ ವರ್ಗವೊಂದು ತನ್ನ 'ಮರ್ಯಾದೆ' ಕಾಪಾಡಿಕೊಳ್ಳಲೋಸುಗ ಹಠಮಾರಿತನದೊಂದಿಗೇ ಹೊಂದಾಣಿಕೆಯನ್ನೂ ಮಾಡಿಕೊಂಡು ಜಗತ್ತಿನಲ್ಲೇ ಅತ್ಯಂತ ಹೆಚ್ಚು ಕಾಲ ಬಾಳುತ್ತಿರುವಂತಹ ದೃಶ್ಯಗಳು ಇಲ್ಲಿ ಸೃಷ್ಟಿಯಾಗಿವೆ.

-**Guity Men of India's Partition,** ಪು.೮೦

ಜಾತಿಪದ್ಧತಿಯ ವಿರುದ್ಧ ಸಾವಿರಾರು ವರ್ಷಗಳಿಂದ ಆಂತರಿಕವಾಗಿಯೂ ಹಲವು ಸಂಘರ್ಷಗಳು ನಡೆದಿದ್ದರೂ, ಅದನ್ನು ನಿವಾರಿಸಿಕೊಳ್ಳಲು ಸಾಧ್ಯವಾಗಿಲ್ಲ. ಆದುದರಿಂದ ಇದು

ಶಾಶ್ವತವಾಗಿ ಇದ್ದುಬಿಡುವುದೇನೋ ಎಂಬ ಆತಂಕ ಉಂಟಾಗಿದೆ. ಈವರೆಗೆ ಜಾತಿಪದ್ಧತಿ ಮೇಲೆ ಒಂದೂವರೆ ಪಟ್ಟು ಮಾತ್ರ ದಾಳಿ ನಡೆದಿದೆ. ಇದರಲ್ಲಿ ಒಂದು ಭಾಗ ಧಾರ್ಮಿಕ ನೆಲೆಯದ್ದಾಗಿದ್ದರೆ, ಇನ್ನರ್ಧ ಭಾಗ ಸಾಮಾಜಿಕ ನೆಲೆಯದ್ದು. ಈಗ ಸಹಭೋಜನ ದಂತಹ ಕಾರ್ಯಕ್ರಮಗಳ ಜೊತೆಗೆ ಅಂತರ್ಜಾತೀಯ ವಿವಾಹಗಳನ್ನು ಪ್ರೋತ್ಸಾಹಿಸುವುದರ ಮೂಲಕ ಸಾಮಾಜಿಕ ದಾಳಿಯನ್ನು ಪೂರ್ಣಗೊಳಿಸಬಹುದಾಗಿದೆ. ಮೂರನೆಯ ದಾಳಿ ರಾಜಕೀಯ ನೆಲಯದ್ದಾಗಿರಬೇಕಾಗುತ್ತದೆ. ಇದು ಜಾತಿಪದ್ಧತಿ ಯಿಂದ ಬಳಲಿದ ಜನ ಸಮುದಾಯಗಳಿಗೆ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ವಿಶೇಷ ಪ್ರಾಶಸ್ತ್ಯ ನೀಡುವ ಮೂಲಕ ಸಾಧಿತವಾಗ ಬೇಕಿದೆ. ಇನ್ನು ನಾಲ್ಕನೆಯ ನೆಲೆ ಎಂದರೆ, ಕೂಲಿಕಾರರ ಕೂಲಿ ಹೆಚ್ಚಿಸುವ, ಲಾಭದಾಯಕವಲ್ಲದ ಹಿಡುವಳಿ ಮೇಲೆ ತೆರಿಗೆ ರದ್ದು ಮಾಡುವ ಮತ್ತು ಭೂರಹಿತರಿಗೆ ಭೂಮಿ ಹಂಚುವ ಕಾರ್ಯಕ್ರಮಗಳಿಗೆ ಸಂಬಂಧಪಟ್ಟುದಾಗಿದೆ.

–ಜಾತಿ ಪ್ರಥಾ (ಹಿಂದಿಯಲ್ಲಿ)

ಜಾತಿ ಅವಕಾಶಗಳನ್ನು ನಿರ್ಬಂಧಿಸುತ್ತದೆ. ನಿರ್ಬಂಧಿತ ಅವಕಾಶ ಸಾಮರ್ಥ್ಯವನ್ನು ಕುಂದಿಸುತ್ತದೆ. ಕುಂದುಗೊಂಡ ಸಾಮರ್ಥ್ಯ ಮತ್ತೆ ಅವಕಾಶಗಳನ್ನು ನಿರ್ಬಂಧಿಸುತ್ತದೆ. ಎಲ್ಲಿ ಜಾತಿ ಇರುವುದೋ ಅಲ್ಲಿ ಅವಕಾಶ ಮತ್ತು ಸಾಮರ್ಥ್ಯಗಳು ಜನತೆಯ ಸದಾ ಸಂಕುಚಿತಗೊಳ್ಳುತ್ತಾ ಹೋಗುವ ಒಂದು ವಲಯಕ್ಕೇ ಸೀಮಿತವಾಗುತ್ತಾ ಹೋಗುತ್ತದೆ.

–Marx, Gandhi and Socialism ಪು. XXXIII

ಜಾತಿ ವಿನಾಶ ಆಂದೋಲನವನ್ನು ದ್ವಿಜರು ತಮ್ಮ ಕರ್ತವ್ಯವೆಂದೂ, ಶೂದ್ರರು ತಮ್ಮ ಹಕ್ಕಿನ ಸ್ಥಾಪನೆಗೆಂದೂ

ಮುನ್ನಡೆಸಬೇಕೆಂದು ನಿರೀಕ್ಷಿಸುವುದು ಸಹಜವೇ. ಆದರೆ ಇದು ಅಷ್ಟು ಸರಿಯಲ್ಲದ ಧೋರಣೆ. ಏಕೆಂದರೆ, ಇದು ದ್ವಿಜರಿಗೂ ಹಕ್ಕಿನ ಆಂದೋಲನವಾಗಬೇಕಿದೆ; ಕಾಲಕ್ರಮದಲ್ಲಿ ಹಕ್ಕು ಮತ್ತು ಕರ್ತವ್ಯಗಳು ಒಂದೇ ಆಗುತ್ತವಲ್ಲವೆ? ರಾಷ್ಟ್ರಮಟ್ಟದಲ್ಲಿ ಜಾತಿ ವ್ಯವಸ್ಥೆಯನ್ನೂ, ಈ ರಾಷ್ಟ್ರದ ಅಸಂಖ್ಯಾತ ಶೂದ್ರರನ್ನೂ ಈಗಿರುವಂತೆಯೇ ನೋಡಿಕೊಳ್ಳುವ ಮೂಲಕ ಈ ದೇಶದ ದ್ವಿಜರು ತಮ್ಮನ್ನು ತಾವು ಅಂತಾರಾಷ್ಟ್ರೀಯ ಮಟ್ಟದ ಶೂದ್ರರನ್ನಾಗಿಸಿಕೊಂಡಿದ್ದಾರೆ.

ವಿಶ್ವಸಂಸ್ಥೆಯಲ್ಲಿ ವಿಶೇಷ ಅಧಿಕಾರವುಳ್ಳ ನಾಲ್ಕು ದೊಡ್ಡ ದೇಶಗಳಿವೆ. ಅವು ಬಿಳಿಯರ ದೇಶಗಳು. ಅವು ಅಂತಾರಾಷ್ಟ್ರೀಯ ಜಾತಿ ವ್ಯವಸ್ಥೆಯಲ್ಲಿನ ದ್ವಿಜರು. ಮಿಕ್ಕೆಲ್ಲ ದೇಶಗಳೂ ಈ ಅಂತಾರಾಷ್ಟ್ರೀಯ ಜಾತಿ ವ್ಯವಸ್ಥೆಯ ಶೂದ್ರರು. ಈ ನಿಜ ಗೊತ್ತಾದ ದಿನ ಬ್ರಾಹ್ಮಣರು ನಮ್ಮ ಜಾತಿ ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವ ಪರಿಯೇ ಬದಲಾಗುತ್ತದೆ.... ಆಗ ದ್ವಿಜ ಮತ್ತು ಶೂದ್ರರಿಬ್ಬರೂ ಅಂತಾರಾಷ್ಟ್ರೀಯ ಜಾತಿಪದ್ಧತಿಯನ್ನು ನಾಶ ಮಾಡಲು ಒಂದಾಗಿ ನಿಲ್ಲುವ ಮೂಲಕ ಮಹಾ ಪರಿವರ್ತನೆ ಯೊಂದಕ್ಕೆ ನಾಂದಿ ಹಾಡಬಲ್ಲರು. ಅಲ್ಲಿ ತನಕ ವ್ಯರ್ಥ ಕಲಹ ಮುಂದುವರೆಯುತ್ತಲೇ ಇರುತ್ತದೆ.

-The Caste System, ಪು ೧೭

ಭಾರತದಲ್ಲಿ ಶೂದ್ರ ಮತ್ತು ಬ್ರಾಹ್ಮಣರಿಬ್ಬರೂ ಜಾತಿ ಪದ್ಧತಿಯಿಂದಾಗಿ ಅರೆಜೀವವಾಗಿ ಬಿದ್ದಿದ್ದಾರೆ. ಶೂದ್ರರನ್ನು ಬ್ರಾಹ್ಮಣರೂ, ಬ್ರಾಹ್ಮಣರನ್ನು ಶೂದ್ರರೂ ಮೇಲೆತ್ತಿ ನಿಲ್ಲಿಸಬೇಕಿದೆ. ಇದಕ್ಕೆ ಸಾವಿರಾರು ಅಡೆತಡೆಗಳಿವೆ, ನಿಜ. ಆದರೆ ಈ ಮಾರ್ಗವನ್ನನುಸರಿಸದೆ ಬೇರೆ ಮಾರ್ಗವಿಲ್ಲ.

-The Caste System, ಪು.೨೦

ಹಲವು ಸಮಾಜವಾದಿಗಳು ಕೂಡಾ ಪ್ರಾಮಾಣಿಕವಾಗಿ, ಆದರೆ ತಪ್ಪಾಗಿ, ಆರ್ಥಿಕ ಸಮಾನತೆಗೆ ದುಡಿದರೆ ಸಾಕು; ಅದರ ಪರಿಣಾಮವಾಗಿ ಜಾತಿ ಅಸಮಾನತೆ ತಂತಾನೇ ಕಾಣೆಯಾಗುವುದು ಎಂದು ಭಾವಿಸುತ್ತಾರೆ. ಅವರು ಆರ್ಥಿಕ ಅಸಮಾನತೆ ಹಾಗೂ ಜಾತಿ ಅಸಮಾನತೆಗಳನ್ನು ಅವಳಿ-ಜವಳಿ ದೆವ್ವಗಳೆಂಬುದನ್ನು ಮತ್ತು ಅವರೆಡನ್ನೂ ಒಮ್ಮೆಗೇ ಕೊಲ್ಲಬೇಕೆಂಬುದನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ.

-**The Caste System,** ಪುಟ ೭೯

ಶೂದ್ರರು, ಮಹಿಳೆಯರು, ಆದಿವಾಸಿಗಳು, ದಮನಿತ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರುಗಳನ್ನೊಳಗೊಂಡ ಶೇ. ೯೦ರಷ್ಟಿರುವ ವಂಚಿತ ಸಮುದಾಯಕ್ಕೆ, ಸರ್ಜರಿ ಇತ್ಯಾದಿ ವಿಶೇಷ ಪರಿಣತಿಯ ಹುದ್ದೆಗಳ ಹೊರತಾಗಿ, ಅವರು ಸ್ಪರ್ಧೆಯಲ್ಲಿ ಸಮನಾಗಿ ಭಾಗವಹಿಸಬಲ್ಲವರಾಗುವವರೆಗೆ ದೇಶದಲ್ಲಿನ ಶೇ. ೬೦ ರಷ್ಟು ಅವಕಾಶಗಳನ್ನು ಮೀಸಲಿಡಬೇಕು.

-**The Caste System,** ಪುಟ ೯೬

ಕೆಳಜಾತಿಗಳ ಯುವ ಜನರ ಮೇಲೆ ಭಾರಿ ಹೊಣೆಗಾರಿಕೆ ಇದೆ. ಉನ್ನತ ಜಾತಿಯವರನ್ನು ಅವರ ಸಂಪ್ರದಾಯ ಆಚರಣೆಯಲ್ಲಿ ಹಾಗೂ ವರ್ತನೆಗಳಲ್ಲಿ ಅನುಕರಿಸುವುದು, ದೈಹಿಕ ಶ್ರಮದ ಕೆಲಸಗಳ ಬಗ್ಗೆ ತಿರಸ್ಕಾರ ತೋರುವುದು, ವೈಯುಕ್ತಿಕ ಪ್ರಗತಿಗಾಗಷ್ಟೇ ಹಂಬಲಿಸುವುದು, ಕಟುವಾದ ಮತ್ಸರ-ಇವನ್ನು ಬಿಟ್ಟು, ಪವಿತ್ರ ಕೆಲಸವೆಂಬಂತೆ ರಾಷ್ಟ್ರದ ನಾಯಕತ್ವ ಕಟ್ಟುವ ಪ್ರಕ್ರಿಯೆಯಲ್ಲಿ ಭಾಗವಹಿಸಿ ಅದನ್ನು ಸಂಪನ್ನಗೊಳಿಸುವುದು ಮಹಿಳೆಯರ, ಶೂದ್ರರ, ಹರಿಜನರ, ಮುಸ್ಲಿಮರ ಮತ್ತು ಆದಿವಾಸಿಗಳ ಪರಮ ಕಾಳಜಿಯಾಗಬೇಕಿದೆ.

-**The Caste System,** ಪುಟ ೮

ಜಾತಿ ಮತ್ತು ಲಿಂಗ ಪ್ರತ್ಯೇಕತೆಗಳೇ ಭಾರತದ ಚೈತನ್ಯವನ್ನು ಕುಂದಿಸಿರುವ ನಿಜವಾದ ಕಾರಣಗಳಾಗಿವೆ.

-**The Caste System,** ಪುಟ ೧

ಜಗತ್ತನ್ನು ಬಾಧಿಸುತ್ತಿರುವ ಎಲ್ಲ ಅನ್ಯಾಯಗಳಿಗೆ ಲಿಂಗ ತಾರತಮ್ಯದಿಂದ ಹುಟ್ಟುವ ಅಸಮಾನತೆಯೇ ಮೂಲ ಆಧಾರವಾಗಿದೆ... ಮಾನವತೆಯ ಬಹುಭಾಗ ಒಂದಲ್ಲ ಒಂದು ಅಸಮಾನತೆಯಿಂದ ನರಳುತ್ತಿದೆ; ಆದರೆ ಅದರ ಅರ್ಧ ಭಾಗ ಲಿಂಗ ಅಸಮಾನತೆಯಿಂದ ಮತ್ತಷ್ಟು ಕಂಗೆಟ್ಟಿದೆ. ಸಾಮೂಹಿಕ ಬದುಕಿನ ಕ್ಷೇತ್ರಗಳಲ್ಲಿ, ಲಿಂಗ ಸಮಾನತೆಯನ್ನು ಸಾಧಿಸಿರು ವುದಾಗಿ ಹೇಳಿಕೊಳ್ಳುವ ಅಮೆರಿಕಾ ಮತ್ತು ರಷ್ಯಾಗಳಲ್ಲೂ ಮಹಿಳೆಯರ ಭಾಗವಹಿಸುವಿಕೆ ಕಮ್ಮಿಯೇ.

–**Marx, Gandhi and Socialism** ಪು. XXXII

ಲೈಂಗಿಕ ಸಂಬಂಧಗಳ ನೀತಿ ಸಂಹಿತೆಯಲ್ಲಿ ಅಪರಾಧಿ ಗಳೆನಿಸಿಕೊಳ್ಳುವ ಎರಡೇ ಎರಡು ಅಂಶಗಳೆಂದರೆ ಬಲತ್ಕಾರ ಮತ್ತು ಸುಳ್ಳು ಅಥವಾ ವಚನಭ್ರಷ್ಟತೆ. ಇದಕ್ಕೆ ಸೇರಿಸಬಹುದಾದ ಇನ್ನೊಂದು ಅಂಶವೆಂದರೆ ಇನ್ನೊಬ್ಬರಿಗೆ ನೋವು ಅಥವಾ ಆಘಾತವುಂಟು ಮಾಡುವುದು. ಇದನ್ನು ಆದಷ್ಟೂ ಆಗದಂತೆ ನೋಡಿಕೊಳ್ಳಬೇಕು.

-**The Caste System,** ಪುಟ ೭

ಮಗಳಿಗೆ ಮದುವೆ ಮಾಡುವುದು ತಂದೆ ತಾಯಿಗಳ ಜವಾಬ್ದಾರಿಯೇನಲ್ಲ. ಅವರ ಜವಾಬ್ದಾರಿ ಏನಿದ್ದರೂ, ಒಳ್ಳೆಯ ಆರೋಗ್ಯ ಮತ್ತು ಶಿಕ್ಷಣ ಒದಗಿಸುವುದರೊಂದಿಗೆ ಮುಗಿಯುತ್ತದೆ. ಹುಡುಗಿ ತನ್ನ ಸಂಗಾತಿಯನ್ನು ಹುಡುಕಿಕೊಳ್ಳುವ ಹಾದಿಯಲ್ಲಿ

ಒಂದು ವೇಳೆ ತಪ್ಪು ಹೆಜ್ಜೆ ಇಟ್ಟರೂ ಅದನ್ನು ಗಂಡು ಹೆಣ್ಣುಗಳ
ಸಹಜ ಸಾಮಾನ್ಯ ಸಂಬಂಧದ ಸ್ಥಾಪನೆಗೆ ತೆರಬೇಕಾದ ಬೆಲೆ
ಎಂದಷ್ಟೇ ಪರಿಗಣಿಸಬೇಕೇ ಹೊರತು ಕಳಂಕವೆಂದು
ಭಾವಿಸಬಾರದು.

– **The Caste system,** ಪು.

ಭಾರತೀಯ ಪುರಾಣದ ಮಹಾ ಸ್ತ್ರೀ ನೀಲವರ್ಣೆ
ಯಾಗಿದ್ದಳು. ದ್ರೌಪದಿಗೆ ಕೃಷ್ಣೆಯೆಂದೂ ಹೆಸರಿತ್ತು. ಆಕೆಯ
ಐವರು ಗಂಡಂದಿರು ಮತ್ತು ಅವಳ ಇನ್ನೂ ಒಂದೆರಡು ದಿವ್ಯ
ಪ್ರೇಮದ ಸೂಚನೆ–ಇವು ಗಂಡು ಅಹಂಕಾರಕ್ಕೆ ಇಷ್ಟವಾಗಲಿಲ್ಲ
ವಾದ್ದರಿಂದಲೋ ಏನೋ, ಆಕೆಯ ಮಹತ್ವವನ್ನು ನಿರ್ಲಕ್ಷಿಸ
ಲಾಗಿದೆ. ಪತಿವ್ರತೆಯರೂ, ಶ್ವೇತವರ್ಣೀಯರೂ ಆದ ಸೀತೆ
ಮತ್ತು ಸಾವಿತ್ರಿ ಭಾರತೀಯ ಸ್ತ್ರೀತ್ವದ ಪ್ರತಿನಿಧಿಗಳು
ಎಂಬುದೇನೋ ನಿಜ. ಆದರೆ ಇವರ ಜೊತೆಗೆ ಸೇರಿಸಲ್ಪಡಲು
ಇನ್ನೂ ಕೆಲವು ಅರ್ಹರಿದ್ದಾರೆ ಎಂದು ಭಾವಿಸಲಾರದ ಭಾರತದ
ಪಾರಂಪರಿಕ ವಿವೇಕ ತನಗೆ ತಾನೇ ಅನ್ಯಾಯ ಮಾಡಿಕೊಂಡಿದೆ.
ಭಾರತೀಯ ಪುರಾಣಗಳಲ್ಲಿ ಪರಿಮಳಭರಿತವಾದ ಎರಡು
ಚೆಂದದ ಹೂಗಳೆಂದರೆ, ಕೃಷ್ಣ ಮತ್ತು ಕೃಷ್ಣೆ. ಒಬ್ಬ ಗಂಡಸು.
ಒಬ್ಬಳು ಹೆಂಗಸು. ಇಬ್ಬರೂ ಕಪ್ಪು.

ಇಡೀ ಜಗತ್ತಿನ ಪುರಾಣ ಅಥವಾ ಇತಿಹಾಸದಲ್ಲಿ
ಬಹುಶಃ ದ್ರೌಪದಿಯೇ ಆಕೆಯ ಕಾಲದ ಎಲ್ಲ ಗಂಡಸರಿಗಿಂತಲೂ
ಹೆಚ್ಚು ಬುದ್ಧಿವಂತೆಯೂ ಕುಶಲಳೂ ಆಗಿದ್ದ ಹೆಣ್ಣು. ಆಕೆಯನ್ನು
ಕೃಷ್ಣನೊಂದಿಗೆ ಹೋಲಿಸುವ ಪ್ರಶ್ನೆಯೇ ಇಲ್ಲ. ಏಕೆಂದರೆ
ಸಾಂದರ್ಭಿಕ ವಿವೇಕ ಮತ್ತು ತಿಳುವಳಿಕೆಯಿದ್ದ ಈ ಹೆಂಗಸು
ಆತನ ಗೆಳತಿಯೂ ಸಹವರ್ತಿಯೂ ಆಗಿದ್ದಳು.

-Interval During Politics, ಪುಟ ೧೩

ಪತಿವ್ರತಾ ಶಕ್ತಿಯ ಸಂಕೇತವಾದ ಸಾವಿತ್ರಿಯ ಜಾಗದಲ್ಲಿ ದ್ರೌಪದಿಯನ್ನು ಕೂರಿಸಲು ಪುರುಷ ಪ್ರಧಾನ ಸಮಾಜ ಹೆದರಿದೆ. ಆದರೆ ಸಾವಿತ್ರಿಯ ಪತಿವ್ರತಾ ಶಕ್ತಿಗೆ ಮಹತ್ವ ನೀಡಿರುವುದು ಗಂಡಿನ ಪ್ರಭುತ್ವವನ್ನು ಪೋಷಿಸುವುದಕ್ಕೇ ಎಂಬುದನ್ನು ನಾವು ಗಮನಿಸಬೇಕು.

–ಸಮಾಜವಾದಿ ಆಂದೋಲನ್‌ಕಿ ಇತಿಹಾಸ್ (ಹಿಂದಿಯಲ್ಲಿ)
ಪು; ೭೭

ಪರ್ದಾ ಮತ್ತು ಬುರ್ಖಾ ಆಚರಣೆಯನ್ನು ಶಿಕ್ಷಾರ್ಹ ಅಪರಾಧಗಳನ್ನಾಗಿ ಮಾಡಬೇಕು ಅಥವಾ ಕನಿಷ್ಠ ಈ ಮುಸುಕುಧಾರಿ ಮಹಿಳೆಯರನ್ನು ಇತರ ಸುಧಾರಣಾವಾದಿ ಮಹಿಳೆಯರು ಅಡ್ಡಗಟ್ಟಿ ಅವರೊಂದಿಗೆ ಮಾತುಕತೆ ನಡೆಸಬೇಕು. ಬಹುಪತ್ನಿತ್ವಕ್ಕೆ ಅವಕಾಶ ಕೊಡುವ ನಿಯಮ ಅಥವಾ ಕಾನೂನುಗಳನ್ನು ಮತ್ತು ಮಹಿಳೆಯರಲ್ಲಿ ಕೀಳರಿಮೆ ಉಂಟು ಮಾಡುವಂತಹ ನಿರ್ದೇಶನಗಳನ್ನು ಒಳಗೊಂಡಿರುವ ಶಾಸ್ತ್ರಗಳು ಜಾರಿಯಾಗಲು ಬಿಡಬಾರದು.

-Mankind, ಆಗಸ್ಟ್–ಸೆಪ್ಟೆಂಬರ್ ೧೯೬೧

ವಯಸ್ಸಾಗುವುದರ ಮತ್ತು ದೈಹಿಕ ಬಲದ ಕೆಲವು ಪ್ರತಿಕೂಲ ಅಂಶಗಳು ಮತ್ತು ಶತ ಶತಮಾನಗಳ ಸಂಪ್ರದಾಯ ಪಾಲನೆಯ ಭಾರಗಳು ಮಹಿಳೆಯನ್ನು ಎರಡನೇ ಲಿಂಗತ್ವಕ್ಕೆ ತಳ್ಳಲ್ಪಟ್ಟಿದೆ. ಆಕೆಗೆ ಸಮಾನ ಅವಕಾಶಗಳನ್ನು ನೀಡುವ ಮೂಲಕ ಲಿಂಗ ಅಸಮಾನತೆಯ ಸಮಸ್ಯೆಯನ್ನು ನಿವಾರಿಸಲು ಸಾಧ್ಯವಿಲ್ಲ. ಯಾವುದೇ ಒಂದು ಜನಸಮುದಾಯ ದೈಹಿಕ ಅಥವಾ ಸಾಂಸ್ಕೃತಿಕ ವೈಕಲ್ಯಗಳಿಂದ ಹಿಂದಕ್ಕೆ ಸರಿಸಲ್ಪಟ್ಟಿದ್ದರೆ, ಅದನ್ನು ಇತರರೊಂದಿಗೆ ಸಮಾನತೆಯ ನೆಲೆಗೆ ತರುವ ಏಕೈಕ

ಮಾರ್ಗವೆಂದರೆ ಅದಕ್ಕೆ ಅವಕಾಶಗಳ ಆದ್ಯತೆಯ ವ್ಯವಸ್ಥೆಯನ್ನು ಜಾರಿಗೆ ತರುವುದೇ ಆಗಿದೆ.

–**Marx, Gandhi and Socialism,** ಪು.XXXIII

ಇಂದಿನ ಭಾರತದ ಆಳುವ ವರ್ಗಗಳ ಮೂರು ಮುಖ್ಯ ಲಕ್ಷಣಗಳೆಂದರೆ ಮೇಲ್ಜಾತಿ, ಶ್ರೀಮಂತಿಕೆ ಮತ್ತು ಇಂಗ್ಲಿಷ್ ಜ್ಞಾನ. ಇವುಗಳಲ್ಲಿ ಯಾವುದಾದರೂ ಎರಡಿದ್ದರೆ ಸಾಕು, ಅಂತಹವರು ಆಳುವ ವರ್ಗಕ್ಕೆ ಸೇರಿಬಿಡುತ್ತಾರೆ. ಇಂತಹವರ ಸಂಖ್ಯೆ ಹೆಚ್ಚೆಂದರೆ ೩೦ ಲಕ್ಷವಿದ್ದೀತು. ಇವರು ೪೦ ಕೋಟಿ ಸ್ಥಳೀಯರ ಎದೆ ಮೇಲೆ ಕೂತು ಅವರನ್ನು ಹತ್ತಿಕ್ಕಿದ್ದಾರೆ. ಅವರ ಬಳಿ ಅಪರಿಮಿತ ಶಕ್ತಿಯ ಎರಡು ಆಯುಧಗಳಿವೆ: ಒಂದು ಕೋವಿ, ಇನ್ನೊಂದು ಇಂಗ್ಲಿಷ್.

-**Interval During Politics,** ಪುಟ ೧೨೮–೨೯

ನಾಗರಿಕವೆಂದು ಕರೆದುಕೊಂಡೂ ಇಡೀ ಜಗತ್ತಿನಲ್ಲಿ ಸಾಯಲು ನಿರಾಕರಿಸುತ್ತಿರುವ ಪುರಾತನ ನಂಬಿಕೆಗಳ ದೇಶ ಭಾರತವೊಂದೇ ಇರಬೇಕು. ಇಲ್ಲಿ ಶಾಸನ, ಆಡಳಿತ, ಶಿಕ್ಷಣ, ನ್ಯಾಯದಾನ, ಸಂಪರ್ಕ ಹೀಗೆ ಎಲ್ಲ ಸಾರ್ವಜನಿಕ ವ್ಯವಹಾರಗಳೂ ಜನತೆಯ ಬಹುಭಾಗಕ್ಕೆ ಗೊತ್ತಿಲ್ಲದ ಭಾಷೆಯಲ್ಲಿ ನಡೆಯುತ್ತಿದೆ... ಅಲ್ಲಾ, ಇದೊಂದು ಪ್ರಜಾಪ್ರಭುತ್ವವೆ?

-**Language,** ಪುಟ ೫೮–೫೯

ಭಾಷೆಯ ಬಗ್ಗೆ ಚರ್ಚಿಸುವಾಗ ನಾವು ಮುಖ್ಯವಾದ ಅಂಶವನ್ನೇ ಮರೆತಿದ್ದೇವೆ. ಹಿಂದುಳಿದ ಅರ್ಥ ವ್ಯವಸ್ಥೆಯೊಂದರಲ್ಲಿ ಪರಕೀಯ ಭಾಷೆಯೊಂದನ್ನು ಎಲ್ಲ ನೆಲೆಗಳಲ್ಲಿ ಬಳಸುತ್ತಾ ಹೋಗುವುದರಿಂದ ಎಲ್ಲ ಕ್ಷೇತ್ರಗಳಲ್ಲಿ ಉತ್ಪಾದನೆ

ಯನ್ನು ಕುಂಠಿತಗೊಳಿಸುತ್ತಾ ಹೋಗುತ್ತೇವೆ. ಶಿಕ್ಷಣದಲ್ಲಿ ಕಲಿಕೆ ಕುಂಠಿತವಾಗುತ್ತದೆ, ಸಂಶೋಧನೆ ಬರಡಾಗುತ್ತದೆ, ಆಡಳಿತದಲ್ಲಿ ಬಿರುಕು ಉಂಟಾಗಿ, ಅದಕ್ಷತೆ ಮತ್ತು ಭ್ರಷ್ಟಾಚಾರ ಹೆಚ್ಚುತ್ತದೆ. ಇಂಗ್ಲಿಷ್ ಬಳಕೆ, ನಮ್ಮ ರಾಷ್ಟ್ರೀಯ ಸ್ವಾಭಿಮಾನಕ್ಕೆ ಧಕ್ಕೆ ತರುತ್ತದೆ ಎನ್ನುವುದಕ್ಕಿಂತ ಹೆಚ್ಚಾಗಿ ಅದು ಅಲ್ಪಸಂಖ್ಯೆಯ ಜನರ ಆಡಳಿತಕ್ಕೆ ಅನುವು ಮಾಡಿಕೊಟ್ಟು ಅಸಮಾನತೆಯ ಮೂಲಕ ನಮ್ಮ ಅಭ್ಯುದಯವನ್ನೂ ಕುಂಠಿತಗೊಳಿಸುತ್ತದೆ ಎಂಬ ಕಾರಣದಿಂದ ಅದನ್ನು ವಿರೋಧಿಸಬೇಕಿದೆ.

-Language, ಪು ೧

ಭಾರತದ ವಿದ್ಯಾರ್ಥಿ ಸಮುದಾಯ ತನ್ನದಲ್ಲ ಭಾಷೆಯೊಂದನ್ನು ಕಲಿಯುವ, ಅದರಲ್ಲಿ ಪ್ರೌಢಿಮೆ ಸಾಧಿಸಿಕೊಳ್ಳುವ ಮುಗಿಯದ ಪ್ರಯತ್ನದಲ್ಲಿ ಬಸವಳಿದು ವಿಷಯಗ್ರಹಿಕೆಯಲ್ಲಿ ಪರಿಪೂರ್ಣತೆ ಸಾಧಿಸುವಲ್ಲಿ ವಿಫಲವಾಗಿದೆ. ಈ ವಿದ್ಯಾರ್ಥಿಗಳ ವಿಜ್ಞಾನ, ಅರ್ಥಶಾಸ್ತ್ರ, ಇತಿಹಾಸ, ರಾಜಕೀಯ ಶಾಸ್ತ್ರ ಇತ್ಯಾದಿ ವಿಷಯಗಳ ಕಲಿಕೆ ಅಗ್ಗದ ಅನುಕರಣೆ ಮಾತ್ರವಾಗಿದೆ... ಭಾರತೀಯ ಶಾಲಾ ಮಗುವನ್ನು, ಅದರ ಮನಸ್ಸು ಮತ್ತು ದೇಹವನ್ನು ಇಂಗ್ಲಿಷ್‌ನ ಅಮಾನವೀಯ ಹೊರೆಯಿಂದ ರಕ್ಷಿಸಬೇಕಾಗಿದೆ.

-Language, ಪುಟ ೧೪

ರಷ್ಯಾ ಮತ್ತು ಜಪಾನುಗಳ ವಿಜ್ಞಾನದ ವಿದ್ಯಾರ್ಥಿಗಳು ವಿದೇಶಿ ಭಾಷೆಯನ್ನು ಕಲಿಯುವ ಭಾರದಿಂದ ಮುಕ್ತರಾದವರು. ಹಾಗಾಗಿಯೇ ಅವರ ವಿಷಯ ಗ್ರಹಿಕೆ ಆಳವಾಗಿ, ಅಂತಹ ಗ್ರಹಿಕೆಯ ಬಲದಿಂದ ಅಪೂರ್ವವೆನ್ನಿಸುವಂತಹ ಸಂಶೋಧನೆಗಳನ್ನೂ, ಆವಿಷ್ಕಾರಗಳನ್ನೂ ಅವರು ಮಾಡಬಲ್ಲವರಾಗಿದ್ದಾರೆ.

-Language, ಪು.೧೪

ನಾವು ತಿದ್ದಬೇಕಾಗಿರುವುದು ಜನರಲ್ಲಿನ ಇಂಗ್ಲಿಷ್ ವ್ಯಾಮೋಹವನ್ನೇ ಹೊರತು, ಸರ್ಕಾರದ ನೀತಿಯನ್ನಲ್ಲ ಎಂದು ಕೆಲವರು ಹೇಳುವರು. ಆದರೆ ಎಲ್ಲಿಯವರೆಗೆ ಹಣ, ಅಧಿಕಾರ ಹಾಗೂ ಪ್ರತಿಷ್ಠೆಗಳು ಇಂಗ್ಲಿಷ್ ಭಾಷೆಯನ್ನು ಹಿಂಬಾಲಿಸುತ್ತಿರುತ್ತವೋ ಅಲ್ಲಿಯವರೆಗೆ ನಮ್ಮ ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಮಾಧ್ಯಮ ಶಿಕ್ಷಣ ಕೊಡಿಸಬಲ್ಲವರು, ಕೊಡಿಸದೇ ಇರುತ್ತಾರೆಂದು ತಿಳಿಯುವುದು ಬರೀ ಹುಂಬತನವಾದೀತು.

-Language, ಪುಟ ೬೨

ಇಂಗ್ಲಿಷ್ ತೊಲಗಿಸಿ ಎಂದರೆ ಅದನ್ನು ಅಮೆರಿಕಾದಿಂದಾಗಲೀ ಇಂಗ್ಲೆಂಡಿನಿಂದಾಗಲೀ ಅಥವಾ ಭಾರತದ ಶಿಕ್ಷಣ ಸಂಸ್ಥೆಗಳಿಂದಾಗಲೀ ತೊಲಗಿಸಿ ಎಂದರ್ಥವಲ್ಲ. ಅದು ಒಂದು ಐಚ್ಛಿಕ ವಿಷಯವಾಗಿ ನಮ್ಮಲ್ಲಿ ಮುಂದುವರಿಯಲೇಬೇಕು. ಹಾಗೇ ಅದನ್ನು ಗ್ರಂಥಾಲಯಗಳಿಂದ ತೊಲಗಿಸುವ ಪ್ರಶ್ನೆಯೇ ಇಲ್ಲ.

-Language, ಪುಟ ೫೮

ಭಾರತದ ಸರ್ವಾಂಗೀಣ ಪ್ರಗತಿಗೆ ಹತ್ತು ಲಕ್ಷ ಇಂಜಿನಿಯರುಗಳು, ಕೋಟ್ಯಂತ ಮೇಸ್ತ್ರಿಗಳು ಬೇಕಾಗುತ್ತಾರೆ. ಈ ಅಭಿವೃದ್ಧಿ ಸೇನೆಯನ್ನು ಇಂಗ್ಲಿಷ್ ಮಾಧ್ಯಮದ ಮೂಲಕ ಸಿದ್ಧಪಡಿಸುತ್ತೇವೆಂದು ಹೇಳುವವನು ಮೂರ್ಖನೋ, ಮೋಸಗಾರನೋ ಆಗಿರಬೇಕಷ್ಟೆ.

-Language, ಪುಟ ೫೯

ಜಗತ್ತಿನ ಆಲೋಚನಾಕ್ರಮದ ಮೇಲೆ ಯುರೋಪ್ ಎಂತಹ ಪ್ರಭುತ್ವ ಸ್ಥಾಪಿಸಿದೆಯೆಂದರೆ, ಐರೋಪ್ಯೇತರ ದೇಶಗಳ

ವಿಶ್ವವಿದ್ಯಾನಿಲಯಗಳ ಜನಕ್ಕೆ 'ಪ್ರಗತಿ', 'ಸಮೃದ್ಧಿ', 'ಬಂಡವಾಳ ಶಾಹಿ', 'ಊಳಿಗಮಾನ್ಯಶಾಹಿ', 'ಸಮಾಜವಾದ', 'ಕಮ್ಯೂನಿಸಂ' ಇತ್ಯಾದಿ ಪರಿಕಲ್ಪನೆಗಳನ್ನು ಸ್ಥಳೀಯತೆಯ ಚೌಕಟ್ಟಿನಲ್ಲಿ ಪುನರ್‌ಪರಿಶೀಲನೆಗೆ ಒಡ್ಡಬೇಕು ಎಂಬುದೇ ಹೊಳೆದಿಲ್ಲ. ಈ ಬೌದ್ಧಿಕ ಪರಿಕರಗಳು ಇಲ್ಲಿನ ವಾಸ್ತವದಲ್ಲಿ ಅಸಮರ್ಪಕವಾಗಿದ್ದು, ಅವನ್ನು ಪುನರ್ವಿನ್ಯಾಸಗೊಳಿಸಬೇಕಾಗಿದೆ ಎಂಬ ಪರಿವೆಯೇ ಇಲ್ಲದೆ ಸಂಶೋಧನೆಗಳ ಹೆಸರಿನಲ್ಲಿ ಅವರು ಮಂಕು ಹಿಡಿದ ಗಾಣದೆತ್ತುಗಳಂತೆ ಸುತ್ತಿದಲ್ಲಿಯೇ ಸುತ್ತುತ್ತಿದ್ದಾರೆ.

-Interval During Politics, ಪುಟ ೮೯

ಹಳೆಯ ಸಮಾಜವಾದ ಧರ್ಮವನ್ನು ಮಾದಕ ವಸ್ತುವೆಂದು ಕರೆದು ತಿರಸ್ಕರಿಸಿದೆ. ಆದರೆ, ಧರ್ಮ ಭಾರತೀಯ ಜನಜೀವನದ ಅವಿಭಾಜ್ಯ ಅಂಗವಾಗಿರುವಾಗ ಅದರ ಬಗ್ಗೆ ಹೊಸ ಸಮಾಜವಾದ ಧರ್ಮ ನಿರಪೇಕ್ಷತೆಯ ನೆಪದಲ್ಲಿ ನಿರ್ಲಕ್ಷ್ಯದಿಂದಿರುವುದು ಸಲ್ಲದು. ಧರ್ಮಕ್ಕೆ ನಾಲ್ಕು ಮುಖಗಳಿವೆ. ಒಂದು ಅನೂಹ್ಯ, ಅನಂತದೊಡನೆ ಸಂವಾದ, ಧ್ಯಾನ, ಪ್ರಾರ್ಥನೆ ಇತ್ಯಾದಿ. ಎರಡು: ಸಾಮಾಜಿಕ ಸದ್ವರ್ತನೆಯ ನೈತಿಕ ತರಬೇತಿ. ಮೂರು: ಜಾತಿ ಮತ್ತು ಲಿಂಗ ಪ್ರತ್ಯೇಕತೆಗಳ ಶಾಸ್ತ್ರ ನಿಯಮಗಳು. ನಾಲ್ಕು: ಅನ್ಯಮತ ನಿಂದನೆ ಮತ್ತು ಆಕ್ರಮಣಕಾರಿ ಹಿಂಸೆ. ಇವುಗಳಲ್ಲಿ ಮೊದಲೆರಡನ್ನು ಮಾನ್ಯ ಮಾಡಿ, ಕೊನೆಯವರೆಡನ್ನು ತಿರಸ್ಕರಿಸಬೇಕು.

-Marx Gandhi and Socialism, ಪು.೩೭೪-೩೭೫

ನಿಜ, ಹಿಂದೂವಿನ ಹೃದಯದಲ್ಲಿ ರಹೀಮನಿಗೆ, ರಾಮನಿಗೆ ಸಿಗುವಷ್ಟು ಗೌರವ ಸಿಗಲಾರದು; ಹಾಗೇ ಮುಸ್ಲಿಂಮನ

ಹೃದಯದಲ್ಲಿ ರಹೀಮನಿಗೆ ಸಿಗುವಷ್ಟು ಗೌರವ ರಾಮನಿಗೆ ಸಿಗಲಾರದು. ಆದರೆ ಈ ಇಬ್ಬರೂ ಪರಸ್ಪರರ ದೇವರುಗಳನ್ನು ಗೌರವಿಸುವುದನ್ನು ಕಲಿಯಬೇಕು.

-ಹಿಂದೂ ಔರ್ ಮುಸಲ್ಮಾನ್, ಪು:೧

ರಾಮ ಅಥವಾ ಮಹಮ್ಮದರನ್ನು ಕುರಿತ ಟೀಕೆಗಳನ್ನು ಕೇಳುವ ಸಹನೆಯನ್ನು ನಾವು ಬೆಳೆಸಿಕೊಳ್ಳಬೇಕು. ಟೀಕೆಗಳು ರಕ್ತಪಾತ ಮತ್ತು ಪುಸ್ತಕ ದಹನಗಳಿಗೆ ಕಾರಣವಾಗಬಾರದು.

-The Caste System, ಪುಟ ೬೦

ಮತಾಂಧತೆ ವಿನಾಶಕರ ಹಾಗೂ ವಿಭಜನಶೀಲವಾಗಿದ್ದು, ಅದರ ಬಗ್ಗೆ ಸರಳೀಕರಣ ಮತ್ತು ಭಾವನಾತ್ಮಕತೆ ಸಲ್ಲದು. ಇದಕ್ಕೆ ಪ್ರತಿಯಾಗಿ, ಧಾರ್ಮಿಕ ತತ್ವ ಹಾಗೂ ಶಾಸ್ತ್ರಗಳನ್ನು, ಅವುಗಳಲ್ಲಿನ ರಚನಾತ್ಮಕ ಅಂಶಗಳು ಯಾವುವು ಮತ್ತು ಅಪ್ರಸ್ತುತವೆನ್ನಿಸುವ ಅಂಶಗಳು ಯಾವುವು ಎಂದು ಗುರುತಿಸುವ ಒಂದು ಸಂಯಮಪೂರ್ಣ ಹಾಗೂ ತಿಳಿಮನಸ್ಸಿನ ಅಧ್ಯಯನವೊಂದಕ್ಕೆ ಒಳಪಡಿಸುವ ಪ್ರಯತ್ನ ಮಾಡುವುದು ಶ್ರೇಯಸ್ಕರ.

-Guity Men of India's Partition, ಪು.೬

ಭಾರತದ ಮಧ್ಯಯುಗೀನ ಚರಿತ್ರೆ ಎಂದರೆ ಹಿಂದೂ-ಮುಸ್ಲಿಂ ಯುದ್ಧಗಳ ಚರಿತ್ರೆಯಷ್ಟೇ ಅಲ್ಲ, ಮುಸ್ಲಿಂ-ಮುಸ್ಲಿಂ ಯುದ್ಧಗಳ ಚರಿತ್ರೆ ಎಂಬುದನ್ನೂ ಅರಿಯಬೇಕು. ಮುಸ್ಲಿಮ್ ದಾಳಿಕೋರರು ಐದು ಬಾರಿ ದೇಶೀ ಮುಸ್ಲಿಮ್ ದೊರೆಗಳನ್ನು ಸೋಲಿಸಿ ಮುಸ್ಲಿಂ ಜನಾಂಗದ ಮೇಲೇ ಭೀಕರ ಅತ್ಯಾಚಾರ ಗಳನ್ನು ನಡೆಸಿದ್ದಾರೆ. ಇಂತಹ ತೈಮೂರ್‌ಗಳನ್ನಾಗಲೀ, ನಾದಿರ್ ಶಾಗಳನ್ನಾಗಲೀ ತಮ್ಮ ಪುರಾತನರು ಎಂದು ಹೇಳಿಕೊಳ್ಳುವ ಜನ

ಸ್ವಾತಂತ್ರ್ಯಕ್ಕೆ ಅರ್ಹರಲ್ಲ; ಹಾಗೂ ಯಾವುದೇ ನಿರಂತರ ಗುರುತಿನ ಆಧಾರವಿಲ್ಲದ ಇಂತಹವರ ಸ್ವಾಭಿಮಾನವೂ ಹುಸಿಯಾದದ್ದು.

ರಜಿಯಾ, ಷೇರ್ ಷಾ, ಜಯಸಿ ಮತ್ತು ರಹೀಮರು; ವಿಕ್ರಮಾದಿತ್ಯ, ಅಶೋಕ, ಹೇಮು ಮತ್ತು ಪ್ರತಾಪ ಸಿಂಹ ರೊಂದಿಗೆ, ಹಿಂದೂ-ಮುಸ್ಲಿಮರಿಬ್ಬರ ಸಾಮಾನ್ಯ ಪುರಾತನರೇ ಆಗಿದ್ದಾರೆ. ಹಾಗೇ ಹಿಂದೂ ಮುಸ್ಲಿಮರಿಬ್ಬರೂ ಘಜ್ನಿ, ಘೋರಿ ಹಾಗೂ ಬಾಬರ್‌ಗಳನ್ನು ದುಷ್ಟ ಹಾಗೂ ಅನಾಗರಿಕ ದಾಳಿಕೋರರು ಮತ್ತು ಕೊಲೆಗಡುಕರೆಂದೂ, ಪೃಥ್ವಿರಾಜ ಮತ್ತು ಸಂಗ ಅಂತಹವರನ್ನು ಭಾರತದ ಮುಠ್ಠಾಳತನ ಹಾಗು ಬುದ್ಧಿ ವೈಕಲ್ಯಗಳ ಪ್ರತೀಕಗಳೆಂದು ಪರಿಗಣಿಸಬೇಕು.

-Guity Men of India's Partition, ಪುಟ ೮

ಭಾರತದಲ್ಲಿ ಮುಸ್ಲಿಮರ ವಿರೋಧಿಗಳು ಅನಿವಾರ್ಯ ವಾಗಿ ಪಾಕಿಸ್ತಾನದ ಗೆಳೆಯರೋ ದಲ್ಲಾಳಿಯೋ ಆಗಿರುವಂತೆ ಪಾಕಿಸ್ತಾನದ ವಿರೋಧಿಗಳು ಅನಿವಾರ್ಯವಾಗಿ ಮುಸ್ಲಿಮರ ಸ್ನೇಹಿತರಾಗಿರುತ್ತಾರೆ. ಮುಸ್ಲಿಮರನ್ನು ವಿರೋಧಿಸುತ್ತಾ ಅವರಿಗೆ ಹಿಂಸೆ ನೀಡುವುದು ಎಂದರೆ ಎರಡು ರಾಷ್ಟ್ರಗಳ ಸಿದ್ಧಾಂತವನ್ನು ಎತ್ತಿ ಹಿಡಿಯುವ ಮೂಲಕ ಪಾಕಿಸ್ತಾನದ ಮುಂದುವರಿಕೆಯನ್ನು ಖಚಿತಪಡಿಸಿಕೊಳ್ಳುವುದೇ ಆಗುತ್ತದೆ.

–Fragments of a World Mind, ಪು.೧೧

ಭಾರತ-ಪಾಕಿಸ್ತಾನಗಳ ಮಹಾ ಒಕ್ಕೂಟವೊಂದರ ರಚನೆಯ ಪ್ರಯತ್ನದ ಮೂಲಕ ಕಾಶ್ಮೀರ, ಪೂರ್ವ ಪಾಕೀಸ್ತಾನ (ಪೂ. ಬಂಗಾಳ) ಹಾಗೂ ಉತ್ತರ ಮತ್ತು ಈಶಾನ್ಯ ಗಡಿ ಪ್ರದೇಶಗಳ ವಿವಾದವನ್ನು ಇತ್ಯರ್ಥಪಡಿಸಿಕೊಳ್ಳುವ ಸಾಧ್ಯತೆ

ಯನ್ನು ಪರಿಶೀಲಿಸಬಹುದಾಗಿದೆ.

–India , China and Northern Frontiers,
ಪು.೧೮೯

ಭಾಷೆ, ಲಿಪಿ, ಧರ್ಮ, ಜೀವನಕ್ರಮ, ಗಡಿ ವಿನ್ಯಾಸ ಹಾಗೂ ಅನೇಕ ಪರಸ್ಪರ ಕೌಲು–ಒಪ್ಪಂದಗಳ ಪ್ರಕಾರ ಟಿಬೆಟ್ ಚೀನಾಕ್ಕಿಂತ ಹೆಚ್ಚಾಗಿ ಭಾರತದೊಂದಿಗೇ ಇದೆ. ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಜನತೆಯ ಆಕಾಂಕ್ಷೆಯ ಬಲದಿಂದ ಅದು ಸ್ವತಂತ್ರ ದೇಶವಾಗಿತ್ತು; ಮತ್ತೀಗ ಅದು ಸ್ವತಂತ್ರವಾಗಬೇಕಿದೆ. ಚೀನಾದ ಪ್ರಸಕ್ತ ಸರ್ಕಾರ ಟಿಬೆಟ್ ಮೇಲೆ ಆಕ್ರಮಣ ಮಾಡುವ ಮೂಲಕ ಅಂತಾರಾಷ್ಟ್ರೀಯ ನೈತಿಕತೆ ಹಾಗೂ ಭಾರತದ ಹಿತಾಸಕ್ತಿಗಳ ಮೇಲೆ ಹಲ್ಲೆ ನಡೆಸಿದೆ.

–India , China and Northern Frontiers,
ಪು.೧೮೯

ಚೀನಾ ತನಗೆ ಮೋಸ ಮಾಡಿತೆಂದು ನೆಹರೂ ಹೇಳುತ್ತಿದ್ದಾರೆ. ಶತ್ರುವಿನಿಂದ ಮೋಸ ಹೋದೆನೆಂದು ಒಪ್ಪಿಕೊಳ್ಳುವ ರಾಜನನ್ನು ಕೂಡಲೇ ಪದಚ್ಯುತಗೊಳಿಸಬೇಕೆಂದು ಚಾಣಕ್ಯ ಹೇಳುತ್ತಾನೆಂಬುದನ್ನು ನೆಹರೂಗೆ ಯಾರಾದರೂ ತಿಳಿಸಬೇಕಿದೆ.

–ಲೋಕಸಭಾ ಭಾಷಣ, ಆಗಸ್ಟ್ ೨೭, ೧೯೬೩

ಸಮಾಜವಾದಿಗಳ ಮೊದಲ ತೊಂದರೆ ಎಂದರೆ, ಅವರು ತಮ್ಮನ್ನು ತಾವು ಪ್ರಜೆಗಳ ಗುರು ಎಂದು ತಿಳಿಯುವುದು. ಆದರೆ ತಾವು ವಿದ್ಯಾರ್ಥಿಗಳು ಕೂಡಾ ಎಂಬುದನ್ನು ಅವರು ಅರಿಯಬೇಕು.

–Marx, Gandhi and Socialism, ಪು ೩೮೯

ಶಿಸ್ತು ಎಂಬುದು ಯಾವುದನ್ನು ಮಾಡಬಾರದು ಎಂಬುದಕ್ಕಷ್ಟೇ ಸಂಬಂಧಿಸಿರಬಾರದು. ಯಾವುದನ್ನು ಮಾಡಬೇಕು ಎಂಬುದಕ್ಕೂ ಸಂಬಂಧಿಸಿರಬೇಕು. ಶಿಸ್ತು ಎಂದರೆ, ಮುಕ್ತ ಮಾತುಕತೆಯ ಉದ್ದನೆಯ ಕೈ ಹಾಗೂ ನಿಯಂತ್ರಿತ ಕ್ರಿಯೆಯ ಬಿಗಿ ಮುಷ್ಠಿ ಎಂಬಂತಿರಬೇಕು.

–**Mankind,** ಜೂನ್ ೧೯೬೮

ಕ್ಷೇತ್ರ ಪದ್ಧತಿ ಒಬ್ಬ ಮೆದುವಾದಿ ಮತ್ತು ಅವಕಾಶವಾದಿ ಶಕ್ತಿಗಳಿಗೆ ಹೆಚ್ಚು ಪ್ರಯೋಜನಕಾರಿಯಾಗಿದೆ. ಅದು, ನೇರ ಮಾತಿನ, ಸತ್ಯ ಹೇಳುವ ಹಾಗೂ ರಾಜಿಗೆ ಸಿದ್ಧವಿಲ್ಲದ ಅಭ್ಯರ್ಥಿಗೆ ಪ್ರತಿಕೂಲವಾಗಿದೆ ಹಾಗೂ ಪಕ್ಷವೊಂದರಲ್ಲಿನ ಪ್ರಗತಿವಾದಿಗಿಂತ ಮೆದುವಾದಿಯಾದ ಮತ್ತು ಎಲ್ಲರನ್ನೂ ಓಲೈಸಬಲ್ಲ ಅಭ್ಯರ್ಥಿಗೆ ಚುನಾವಣಾ ವಿಜಯದ ಅವಕಾಶ ಹೆಚ್ಚಿದೆ. ಒಂದಲ್ಲ ಒಂದು ರೀತಿಯ ಪಟ್ಟಿ ಪದ್ಧತಿಯ(List System) ಅಡಿಯಲ್ಲಿನ ಪ್ರಮಾಣಾನುಸಾರ ಪ್ರಾತಿನಿಧ್ಯ ವ್ಯವಸ್ಥೆ ಮಾತ್ರ ಸಂಸದೀಯ ಪ್ರಾತಿನಿಧ್ಯದಲ್ಲಿ ಪಾಲು ಪಡೆದಿರುವ ಯಾವುದೇ ಪಕ್ಷದಲ್ಲಿ ನಿಜವಾದ ಪ್ರಗತಿಶೀಲತೆಯನ್ನು ಖಚಿತಪಡಿಸಿಕೊಳ್ಳಬಲ್ಲುದು.

–**Rs.25000/- A Day** ಪು.೬೨–೬೩

ಯಾರು ಅನ್ಯಾಯವನ್ನು ಪ್ರತಿಭಟಿಸಲು ಇತರ ಎಲ್ಲ ಮಾರ್ಗಗಳೂ ಮುಗಿದಾಗ ಪ್ರಯತ್ನಿಸದೆ ಸುಮ್ಮನಿರುತ್ತಾನೆಯೋ ಅವನು ಅನ್ಯಾಯಕ್ಕೆ ಕಾರಣಕರ್ತರಾದವರಲ್ಲಿ ಒಬ್ಬನಾಗುತ್ತಾನೆ. ಈ ರೀತಿ ಪ್ರತಿಭಟಿಸುವ ಸತ್ಯಾಗ್ರಹಿಗಳು ಎಷ್ಟರ ಮಟ್ಟಿಗೆ ಸಂಖ್ಯೆಯಲ್ಲಿ ಹೆಚ್ಚಾಗುತ್ತಾರೋ, ಅಷ್ಟರ ಮಟ್ಟಿಗೆ ಆ ದೇಶ ಹೆಚ್ಚು ಸ್ವತಂತ್ರವಾಯಿತು ಎಂದು ಭಾವಿಸುವೆ.

–**Marx, Gandhi and Socialism,** ಪು ೩೪೫

ಹೊಸ ನಾಗರೀಕತೆಯ ನಿರ್ಮಾಣಕ್ಕೆ ಹೊರಟವರು ಸೋಲಿಸಲಷ್ಟೇ ಅಲ್ಲ, ಸೋಲಲೂ ಸಿದ್ಧವಾಗಿರಬೇಕು, ಸೋತು ಮತ್ತೆ ಹೋರಾಟವನ್ನು ಮುಂದುವರೆಸಲು ಕೂಡಾ.... ಅಂತಿಮ ವಿಜಯ ಸಮಾಜವಾದದ್ದೇ ಆಗಿರುತ್ತದೆ.

-Marx, Gandhi and Socialism, ಪು ೩೬೨

ಗೀತಾಂಜಲಿ ಪುಸ್ತಕ ಪ್ರಕಾಶನ

ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ, ಶಿವಮೊಗ್ಗ 577201

ಮೊಬೈಲ್– 94498 86390, 99161 97291

ನಮ್ಮ ಕೆಲವು ಪ್ರಕಟಣೆಗಳು

- ಗಂಡುಗಲಿ ಮದಕರಿನಾಯಕ (ಕಾದಂಬರಿ)/ ಬಿ.ಎಲ್ ವೇಣು/ 195/–
- ವಿಷದಿಂದ ಪುಟಿಯಿತು ಅಮೃತ (ಕಾದಂಬರಿ) / 80/–
  ದಮಯಂತಿ ಶ್ರೀಕಾಂತ
- ಗಿಡಗಳ ಮೇಲೆ ಧೂಳು (ಕಾದಂಬರಿ) / 150/–
  ಗೋವಿಂದ ಮಿಶ್ರ: ಅನುವಾದ : ಆರ್.ಪಿ.ಹೆಗಡೆ
- ಒಡೆದ ಕನ್ನಡಿ (ಕಾದಂಬರಿ) / ಡಾ. ಕೇಶವ ಶರ್ಮ ಕೆ/ 195/–
- ಮುಖವಾಡದವರು (ಕಾದಂಬರಿ) / ಡಾ.ನಾ. ಡಿಸೋಜ/ 80/–
- ಶತಕತ್ರಯರು (ಸಂಸ್ಕೃತಿ ಚಿಂತನ ಬರಹಗಳು) / ಜೆ.ವಿ. ಜಯರಾಜಶೇಖರ/ 85/–
- ಲಿಂಗಲೀಲಾ ಚಾರಿತ್ರ ಸಂಗ್ರಹ (ಸಂಸ್ಕೃತಿ ಚಿಂತನ ಬರಹಗಳು) / 85/–
  ಜೆ.ವಿ. ಜಯರಾಜಶೇಖರ
- ಕಾಲುದಾರಿ (ಕಥಾ ಸಂಕಲನ) / ದವನ ಸೊರಬ/ 80/–
- ಪಂಚತಂತ್ರ (ಮಕ್ಕಳಿಗಾಗಿ ಕಥಾ ಸಂಕಲನ) / ಡಾ.ನಾ. ಡಿಸೋಜ/ 30/–
- ಹಿತೋಪದೇಶ (ಮಕ್ಕಳಿಗಾಗಿ ಕಥಾ ಸಂಕಲನ) / 30/–
  ಡಾ.ನಾ. ಡಿಸೋಜ
- ಗುರುದೇವರ ಕಥೆಗಳು (ಮಕ್ಕಳಿಗಾಗಿ ಕಥಾ ಸಂಕಲನ) / 30/–
  ಡಾ.ನಾ. ಡಿಸೋಜ
- ಹಾ। ಸವಿಗನ್ನಡ (ಚಿಂತನ ಬರಹಗಳು) / 30/–
  ಡಾ.ನಾ. ಡಿಸೋಜ
- ವಿವೇಕ ವಿವೇಚನೆ (ಚಿಂತನ ಬರಹಗಳು) / 45/–
  ಡಾ.ನಾ. ಡಿಸೋಜ
- ನುಡಿಗನ್ನಡ (ಚಿಂತನ ಬರಹಗಳು) / 75/–
  ಸಿ.ಟಿ. ಶೈಲಾ ಜಯಕುಮಾರ
- ನಿಮ್ಮ ಕನಸಿನ ರಹಸ್ಯ (ವೈಜ್ಞಾನಿಕ ದೃಷ್ಟಿಕೋನದ ಬರಹಗಳು) / 75/–
  ತಡಸೂರು ಉಮೇಶ್

- ನಾವು ಸಂತೋಷವಾಗಿರುವುದು ಹೇಗೆ? (ವ್ಯಕ್ತಿತ್ವ ವಿಕಾಸನ ಲೇಖನಗಳು) / 12
  ಎಸ್.ಜಿ. ವೀರನ ಗೌಡ
- ಎಷ್ಟು ಬಣ್ಣದ ಇರುಳು (ಕವನ ಸಂಕಲನ) / ಮುದ್ದು ತೀರ್ಥಹಳ್ಳಿ/ 60/–
- ಚಂದ್ರನ ತುಂಡು (ಲಘು ಬರಹಗಳು) / ಮುದ್ದು ತೀರ್ಥಹಳ್ಳಿ/ 90/–
- ಮಿಲಿನಿಯಮ್ ಕನ್ನಡ ಸಾಮಾನ್ಯ ಅಧ್ಯಯನ ಕೋಶ/ (ಸ್ಪರ್ಧಾತ್ಮಕ ಪರೀಕ್ಷೆಗಳ
- ಗ್ರಹಿಕೆ (ಮಹಿಳಾ ದೃಷ್ಟಿ ಕೋನದ ಲೇಖನಗಳು) / ಡಾ.ಈ. ಯರ್ರಿಸ್ವಾಮಿ/ 60
- ಲಿಂಗ ವ್ಯವಸ್ಥೆ ಸಂಕಥನ / 100/–
  ಪ್ರೇಮ ಅಪಚಂದ (ಮಹಿಳಾ ದೃಷ್ಟಿಕೋನದ ಲೇಖನಗಳು)
- ಮಹಿಳೆ ಮತ್ತು ಜಾತಿಶ್ರೇಣಿಕರಣ: ಅಂಬೇಡ್ಕರ್ ದೃಷ್ಟಿಕೋನ/ 150/–
  ಡಾ.ಈ. ಯರ್ರಿಸ್ವಾಮಿ
- ಸೋಗಡು (ಸಂಸ್ಕೃತಿ ಚಿಂತನೆ) / ಡಾ.ಈ. ಯರ್ರಿಸ್ವಾಮಿ/ 100/–
- ಇತಿಹಾಸ (ದ್ವಿ.ಪಿ.ಯು.ಸಿ ಪಠ್ಯಪುಸ್ತಕ) / ಸೀತಾರಾಮಭಟ್/ ರಾಮಪ್ರಸಾದ್/ 1
- ಹಾಸ್ಯ ಲಹರಿ (ಹಾಸ್ಯ – ಲೇಖನಗಳು) / 30/–
- ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜಯನಗರದ ಪ್ರಾತಿನಿಧಿಕರಣ/ ಡಾ. ಗಾದಪ್ಪ
- ದೇವರಾಜ ಅರಸು (ವ್ಯಕ್ತಿ ಚಿತ್ರಣ) ಡಾ. ಹಣಮಂತ್ರಾಯ ದೊಡ್ಡಮನಿ / 190/
- ಕುಮಾರ ರಾಮ (ವ್ಯಕ್ತಿ ಚಿತ್ರಣ) /ಷಣ್ಮುಖಪ್ಪ/ 80/–
- ಹಿರಿಯರ ಹಾದಿ/ ಪ್ರೋ. ಎಂ.ಎನ್. ಸುಂದರರಾಜ್/ 90/–
- ನೀಲನಕ್ಷೆ (ವಿಮರ್ಶೆ)/ಡಾ. ಕೇಶವ ಶರ್ಮ ಕೆ. / 280/–
- ಕಂಡದ್ದು–ಕಾಣದ್ದು (ವಿಮರ್ಶೆ)/ಡಿ.ಎಸ್. ನಾಗಭೂಷಣ/ 250/–
- ಕುವೆಂಪು ಸಾಹಿತ್ಯ ದರ್ಶನ/ ಡಿ.ಎಸ್. ನಾಗಭೂಷಣ/ 95/–
- ಕುವೆಂಪು ಪುನರಾನ್ವೇಷಣೆ/ ಡಿ.ಎಸ್. ನಾಗಭೂಷಣ 240/–
- ಲೋಹಿಯಾ ಕೈಪಿಡಿ/ 25 ರೂ
- ಲೋಹಿಯಾ ವಾಣಿ/ 25 ರೂ.
- ಜೆ.ಪಿ. ಕೈಪಿಡಿ/ 25 ರೂ.



ವ್ಯಕ್ತಿವಾದದ ವೈಭವದೊಂದಿಗೆ ಆರಂಭವಾದ ಪ್ರಸಕ್ತ ನಾಗರೀಕತೆ ತನ್ನ ಪೂರ್ಣ ಸುತ್ತನ್ನು ಪೂರ್ಣಗೊಳಿಸಿ, ಈ ಅವಧಿಯಲ್ಲಿ ಮನುಷ್ಯನನ್ನು ಸಮೂಹ ಯಂತ್ರ ವ್ಯವಸ್ಥೆಯ ಒಂದು ಬಿಡಿಭಾಗವಷ್ಟೇ ಎಂಬಂತೆ ಮಾಡಿಬಿಟ್ಟಿದೆ. ಇದಕ್ಕೆ ಕಾರಣ ಈ ಆಧುನಿಕ ನಾಗರೀಕತೆ ಎಂಬುದು ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಸಾಧನೆಯ ಭರದಲ್ಲಿ ಅಧ್ಯಾತ್ಮಿಕ ಸಮಾನತೆಯ ಸಾಧನೆ ಕಡೆ ಗಮನ ಹರಿಸುವುದನ್ನೇ ಮರೆತಿದ್ದಿರಬಹುದು... ಈ ಹಿಂದಿನ ನಾಗರೀಕತೆಗಳು ಸಾಮಾಜಿಕ ಅಸಮಾನತೆ ಮತ್ತು ಅಧ್ಯಾತ್ಮಿಕ ಸಮಾನತೆಗಳ ನಡುವಣ ಅಂತರದ ಭಾರದಿಂದ ಕುಸಿದಿದ್ದರೆ, ಆಧುನಿಕ ನಾಗರೀಕತೆ ಸಾಮಾಜಿಕ ಸಮಾನತೆ ಹಾಗೂ ಅಧ್ಯಾತ್ಮಿಕ ಸಮಾನತೆಗಳ ನಡುವಣ ಅಂತರದ ಭಾರದಿಂದ ಕುಸಿಯುತ್ತಿದೆ. ಏಕೆಂದರೆ, ಆಧುನಿಕ ಮನುಷ್ಯ ಕ್ರಾಂತಿಕಾರಿ ತಂತ್ರಜ್ಞಾನದ ಅಗಾಧ ಬೆಳವಣಿಗೆ ಮೂಲಕ ಎಂತಹ ಮನಃಸ್ಥಿತಿಯನ್ನು ಮುಟ್ಟಿದ್ದಾನೆಂದರೆ, ಆತ ತನ್ನ ಸಹಜೀವಿಗಳೊಂದಿಗೆ ನೇರ ಹಾಗೂ ಆಪ್ತ ಬಂಧುತ್ವವನ್ನೇ ಸಂವೇದಿಸಲಾರದವನಾಗಿದ್ದಾನೆ.

—ಡಾ. ರಾಮಮನೋಹರ ಲೋಹಿಯಾ

ಗೀತಾಂಜಲಿ ಪುಸ್ತಕ ಪ್ರಕಾಶನ
ಕಂದಾಯ ಭವನ, ನೂರಡಿ ರಸ್ತೆ, ರಾಜೇಂದ್ರ ನಗರ,
ಶಿವಮೊಗ್ಗ-೫೭೭ ೨೦೧
+91 944988 6390

ISBN 978-93-81876-04-6
9 789381 876046
₹ ೨೫